ದಾನ ಮಾಡಿರಿ,
ಆದರೆ ಅದರಿಂದ
ಪ್ರತಿಫಲ
ನಿರೀಕ್ಷಿಸಬೇಡಿ.
ಅದು ತಾನಾಗಿಯೇ
ವಾಪಸ್ ಬರಲಿದೆ
–ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)

ಸಂಪಾದಕರು:ಸಿದ್ರಾಮಯ್ಯ ಸ್ವಾಮಿ EDITOR:SIDRAMAYYA SWAMY

ಸೋತೆ ಎಂದು ನೀ
ಮುಂದಿಟ್ಟ ಹೆಜ್ಜೆ
ಹಿಂದಿಡಬೇಡ...
ಏಕೆಂದರೆ...
ಯಾರಿಗೆ ಗೊತ್ತು ಆ ಹೆಜ್ಜೆ
ನಿನ್ನ ಇತಿಹಾಸವನೇ ಸೃಷ್ಟಿ
ಮಾಡುವ
ಹೆಜ್ಜೆಯಾಗಿರಬಹುದು...

bidarvani.com ಇ–ಪೇಪರ್bidarvani.online bidarvani bidarvani@gmail.com Whatsapp Contact:9148471077

KARKAN/77693/2019 ಸಂಪುಟ:08 ಸಂಚಿಕೆ:188 ದಿನಾಂಕ:25.10.2025 ಶನಿವಾರ ಪುಟ.4 ಬೆಲೆ:02 ರೂ ಮೊ.9945793175

## ಗ್ಯಾರಂಟಿಗಳು ಸೂಕ್ತವಾಗಿ ಜನರಿಗೆ ತಲುಪಲಿ– ಅಮೃತರಾವ ಚಿಮಕೋಡೆ

ಬೀದರ.ಅ.24:ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಪಂಚ ಗ್ಯಾರಂಟಿಗಳು ಸೂಕ್ತವಾಗಿ ಜನರಿಗೆ ತಲುಪಲಿ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಅಮೃತರಾವ ಚಿಮಕೋಡೆ ಅವರು ತಿಳಿಸಿದರು.




ಅವರು ಶುಕ್ರವಾರ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ನಡೆದ ಜಿಲ್ಲಾ ಪಂಚ ಗ್ಯಾರಂಟಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಒಟ್ಟು ಕುಟುಂಬದ ಮಹಿಳಾ ಮುಖ್ಯಸ್ಥೆಯ ಹೆಸರಿನಲ್ಲಿರುವ ಪಡಿತರ ಚೀಟಿಗಳ ಸಂಖ್ಯೆ 381970 ಇವರಲ್ಲಿ ಗೃಹಲಕ್ಷ್ಮೀ ಯೋಜನೆಯಡಿಯಲ್ಲಿ ಆಗಸ್ಟ್ ಅಂತ್ಯಕ್ಕೆ 355304 ಫಲನುಭವಿಗಳು ನೊಂದಾಣಿಯಾಗಿರುತ್ತಾರೆ ಮತ್ತು ಮಾಹೆಕ್ಕೆ 2000 ರೂ ಅಂತೆ 1382.49 ಕೋಟಿ ಹಣವನ್ನು ಡಿಬಿಟಿ ಮೂಲಕ ವರ್ಗಾಯಿಸಲಾಗುತ್ತಿದೆ ಹಾಗೂ ಐಟಿ ಜಿ.ಸ್.ಟಿ ಸಮಸ್ಯೆ ನಿವಾರಣೆ ಆದವರು ಮತ್ತೆ ಅರ್ಜಿ ಸಲ್ಲಿಸಲು ತಿಳಿಸಬೇಕು ಎಂದರು.

ಅನ್ನಭಾಗ್ಯ ಯೋಜನೆಯಡಿಯಲ್ಲಿ 13,13,305 ಫಲಾನುಭವಿಗಳಿದ್ದು, 333.28 ಕೋಟಿ ರೂಪಾಯಿ ಅನುದಾನ ಬಳಕೆಯಾಗಿದೆ. ಜುಲೈ 2023 ರಿಂದ ಜನವರಿ 2025 ರವರಿಗೆ 5 ಕೆಜಿ ಅಕ್ಕಿ ಮತ್ತು ಉಳಿದ 5 ಕೆಜಿ ಅಕ್ಕಿಯ ಮೊತ್ತವನ್ನು ಡಿಬಿಟಿ ಮೂಲಕ ಹಣ ವರ್ಗಾಯಿಸಲಾಗಿತ್ತು ಆದರೆ ಫೆಬ್ರವರಿ 2025 ರಿಂದ 10ಕೆಜಿ ಅಕ್ಕಿ ನೀಡಲಾಗುತ್ತಿದ್ದು, ಜುಲೈಯಿಂದ ಅಕ್ಕಿ ಜೊತೆಗೆ ಜೋಳ ಸೇರಿಸಿ ಒಟ್ಟು 10 ಕೆಜಿ ಆಹಾರಧಾನ್ಯ ನೀಡಲಾಗುತ್ತದೆ. ಪಡಿತರ ಅಕ್ಕಿಯು ಕಾಳಸಂತೆಯಲ್ಲಿ ಮಾರಾಟ ಆಗದಂತೆ ನೋಡಿಕೊಳ್ಳಬೇಕು ಮತ್ತು ಕೆಲವು ಹಳ್ಳಿ ಮತ್ತು ತಾಂಡಗಳಲ್ಲಿ ನ್ಯಾಯ ಬೆಲೆ ಅಂಗಡಿ ಇಲ್ಲ ಬೇರೆ ಗ್ರಾಮಕ್ಕೆ ಹೋಗಿ ತರಬೇಕಾಗಿದೆ, ಜನರಿಗೆ ಇಂತಹ ತೊಂದರೆಯಾಗದಂತೆ ರೇಷನ್ ಉಪ ಕೇಂದ್ರ ಸ್ಥಾಪಿಸಿ, ರೇಷನ್ ನೀಡಬೇಕು

ಹಾಗೂ ತಂಬ್ (ಬಯೋಮೆಟ್ರಿಕ್) ತೆಗೆದುಕೊಂಡ ಕೂಡಲೇ ರೇಷನ್ ನೀಡಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಯುವನಿಧಿ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 12196 ನೊಂದಣಿಯಾಗಿದ್ದು ಅದರಲ್ಲಿ 11900 ಪದವಿ ಅಭ್ಯರ್ಥಿಗಳು ಮತ್ತು 296 ಡಿಪ್ಲೋಮಾ ಅಭ್ಯರ್ಥಿಗಳು ಫಲಾನುಭವಿಗಳಿಗೆ 26.90 ಕೋಟಿ ರೂಪಾಯಿ ಅನುದಾನ ಬಳಕೆಯಾಗಿದೆ. ಯುವನಿಧಿ ಯೋಜನೆ ಬಗ್ಗೆ ಅಧಿಕಾರಿಗಳು ಹೆಚ್ಚಿನ ರೀತಿ ಯಲ್ಲಿ ಪ್ರಚಾರ ಮತ್ತು ತಾಲ್ಲೂಕು ಮಟ್ಟದಲ್ಲೂ ಕೂಡ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಯುವನಿಧಿ ಪ್ಲಸ್ ಕಾರ್ಯಕ್ರಮ ಅಡಿ ತರಬೇತಿ ನೀಡಲು ಹೆಚ್ಚಿನ ಕ್ರಮ ಕೈಗೊಳ್ಳಬೇಕು ಹಾಗೂ ಪದವಿ ಮತ್ತು ಡಿಪ್ಲೊಮಾ ಕೋರ್ಸ್ ಮುಗಿಸಿದವರ ಪಟ್ಟಿ ಪಡೆದು ಯುವನಿಧಿ ಯೋಜನೆಯಡಿ ನೋಂದಣಿಯಾಗುವಂತೆ ಕ್ರಮ ವಹಿಸಬೇಕೆಂದು ತಿಳಿಸಿದರು.

ಜಿಲ್ಲೆಯಲ್ಲಿ ಗೃಹ ಜ್ಯೋತಿ ಯೋಜನೆಯಡಿಯಲ್ಲಿ ಒಟ್ಟು 3,53,011 ಫಲಾನುಭವಿಗಳಿದ್ದು 410.52 ಕೋಟಿ ಹಣವನ್ನು ಬಳಕೆಯಾಗಿದೆ. ಶಕ್ತಿ ಯೋಜನೆಯಡಿಯಲ್ಲಿ ಜಿಲ್ಲೆಯಲ್ಲಿ 11–06–2023 ರಿಂದ 12–10–2025 ರವರಿಗೆ ಮಹಿಳಾ ಮತ್ತು ಬಾಲಕಿಯರು ಒಟ್ಟು ಸೇರಿ 9.74 ಕೋಟಿ ಫಲಾನುಭವಿಗಳು ಸೌಲಭ್ಯ ಪಡೆದಿದ್ದಾರೆ ಹಾಗೂ ವಿಭಾಗದ ವಾಹನದಲ್ಲಿ ಪ್ರತಿ ದಿನ ಸರಾಸರಿ 1.14 ಲಕ್ಷ ಮಹಿಳೆಯರು ಪ್ರಯಾಣಿಸುತ್ತಿದ್ದಾರೆ ಇದಕ್ಕೆ 283.84 ಕೋಟಿ ಸಂದಾಯವಾಗಿದೆ ಮತ್ತು ಪ್ರತಿ ದಿನ ಪ್ರಯಾಣಿಕರಿಂದ ಸರಾಸರಿ 33.24 ಲಕ್ಷ ಸಾರಿಗೆ ಆದಾಯವಾಗುತ್ತಿದೆ ಹಾಗೂ ಕಳೆದ ಸಭೆಯ ಬೇಡಿಕೆಯಂತೆ ಬಸ್ ಸಮಸ್ಯೆ ಇರುವ ಕಡೆಗೆ ಬಸ್ಸಿನ ವ್ಯವಸ್ಥೆ ಮಾಡಲಾಗಿದೆ ಎಂದರು.

ಕೆಲವು ಕಡೆ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಬಸ್ ನಲ್ಲಿಸುತ್ತಿಲ್ಲ ಎಂಬ ಆರೋಪ ಕೇಳಿ ಬರುತ್ತಿದ್ದು, ಸಮಸ್ಯೆಯನ್ನು ತಕ್ಷಣ ಪರಿಹರಿಸಬೇಕು ಮತ್ತು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

## ಶಿಕ್ಷಕರ ಅರ್ಹತಾ ಪರೀಕ್ಷೆ ಕಾರ್ಯಾಗಾರ 26ಕ್ಕೆ

ಬೀದರ್.ಅ.24:ನಿರಂಜನ್ ಚಾರಿಟಬಲ್ ಟ್ರಸ್ಟ್ ಸಂಚಾಲಿತ ಸ್ಪರ್ಧಾಗುರು ಐಎಎಸ್ ಆ್ಯಂಡ್ ಕೆಎಎಸ್ ಸ್ಟಡಿ ಸೆಂಟರ್ ನಗರದ ಗುಂಪಾ ರಸ್ತೆಯಲ್ಲಿನ ಬೆಲ್ದಾಳೆ ಪೆಟ್ರೋಲ್ ಬಂಕ್ ಹಿಂದುಗಡೆಯ ಬಸವ ಪಿ.ಯು. ಕಾಲೇಜಿನಲ್ಲಿ ಅ. 26 ರಂದು ಬೆಳಿಗ್ಗೆ 10.30ಕ್ಕೆ ಶಿಕ್ಷಕರ ಅರ್ಹತಾ ಪರೀಕ್ಷೆ(ಟಿಇಟಿ)ಯ ಉಚಿತ ಕಾರ್ಯಾಗಾರ ಹಮ್ಮಿಕೊಂಡಿದೆ.

ಕಾರ್ಯಾಗಾರದಲ್ಲಿ ಶಿಶು ಮನೋವಿಜ್ಞಾನ, ಗಣಿತ, ವಿಜ್ಞಾನ, ಇತಿಹಾಸ, ಭೂಗೋಳ, ಕನ್ನಡ, ಇಂಗ್ಲಿಷ್ ವಿಷಯಗಳ ಸಂಪನ್ಮೂಲ ವ್ಯಕ್ತಿಗಳು ಅಭ್ಯರ್ಥಿಗಳಿಗೆ ಮಾರ್ಗದರ್ಶನ ಮಾಡಲಿದ್ದಾರೆ. 150 ಅಂಕಗಳ ಮಾದರಿ ಪರೀಕ್ಷೆಯೂ ನಡೆಯಲಿದೆ ಎಂದು ಕೇಂದ್ರದ ಮುಖ್ಯಸ್ಥ ಅಮೀತ್ ಸೋಲಪುರ ತಿಳಿಸಿದ್ದಾರೆ.

ಜಿಲ್ಲೆಯ ಅಭ್ಯರ್ಥಿಗಳಿಗೆ ನೆರವಾಗುವುದು ಕಾರ್ಯಾಗಾರ ಆಯೋಜನೆ ಉದ್ದೇಶವಾಗಿದೆ. ಅಭ್ಯರ್ಥಿಗಳು ಕಾರ್ಯಾಗಾರದ ಲಾಭ ಪಡೆದುಕೊಳ್ಳಬೇಕು. ಮಾಹಿತಿಗೆ ಮೊಬೈಲ್ ಸಂಖ್ಯೆ 8105332701 ಅಥವಾ 6360738392ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

## ಕನ್ನಡ ನಾಡು–ನುಡಿಗಾಗಿ ಶ್ರಮಿಸಿದ ಡಾ.ಸಂಜೀವ ಕುಮಾರ ಅತಿವಾಳೆ ಅವರಿಗೆ "ಕಲಾ ದರ್ಪಣ ಕನ್ನಡ ಕಣ್ಮಣಿ" ರಾಷ್ಟ್ರೀಯ ಪ್ರಶಸ್ತಿ

ಬೀದರ್.ಅ.24:ಕಲಾದರ್ಪಣ ಆರ್ಟರಿಫ್ಲೆಕ್ಸ್ಟ್ ಬೆಂಗಳೂರು ವತಿಯಿಂದ ಪ್ರತಿವರ್ಷ ಕನ್ನಡ ನಾಡು, ನುಡಿ, ಸಂಸ್ಕೃತಿಗಾಗಿ ಶ್ರಮಿಸುತ್ತಿರುವಗಣ್ಯ ವ್ಯಕ್ತಿಗಳಿಗೆ ನೀಡಲಾಗುವ "ಕಲಾ ದರ್ಪಣ ಕನ್ನಡ ಕಣ್ಮಣಿ" ರಾಷ್ಟ್ರೀಯ ಪ್ರಶಸ್ತಿ ಪ್ರಧಾನ ಸಮಾರಂಭವು ಅಕ್ಟೋಬರ್ 25ರಂದು ಶನಿವಾರ ಬೆಂಗಳೂರಿನ ಮಲ್ಲತಹಳ್ಳಿಯ ಕಲಾಗ್ರಾಮ ಆಡಿಟೋರಿಯಂನಲ್ಲಿ ಅದ್ದೂರಿಯಾಗಿ ನಡೆಯಲಿದೆ.ಈ ಬಾರಿ ಈ ಗೌರವಕ್ಕೆ ಬೀದರ ಜಿಲ್ಲೆಯ ಹೆಮ್ಮೆಯ ಕನ್ನಡ ಸೇವಕ ಹಾಗೂ ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಸಂಜೀವಕುಮಾರ ಅತಿವಾಳೆ ಅವರನ್ನುಆಯ್ಕೆ ಮಾಡಲಾಗಿದೆ. ಅವರು ಗಡಿನಾಡು ಬೀದರದಲ್ಲಿ ಕನ್ನಡ ನಾಡು–ನುಡಿಗಾಗಿ ನಿರಂತರ ಶ್ರಮಿಸುತ್ತಿದ್ದು, ರಾಜ್ಯದಗಡಿ ಪ್ರದೇಶಗಳಲ್ಲಿ ಕನ್ನಡಾಭಿಮಾನವನ್ನು ಬೆಳೆಸುವ ನಿಟ್ಟಿನಲ್ಲಿ ಹಲವಾರು ಸಾಹಿತಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ.

ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ತಜ್ಞ ಸಮಿತಿ ಸದಸ್ಯರು ಹಾಗೂ ಭಾರತ ಸರ್ಕಾರದ ಸಂಸ್ಕೃತಿ ಸಚಿವಾಲಯದ ಹಿರಿಯ ಫೆಲೋಶಿಪ್ ಪ್ರಶಸ್ತಿ ವಿಜೇತರಾದ ಡಾ.ಜಿ.ಕೆ.ಅಶ್ವಥ್ ಹರಿತಸ್ಸ್ ಮತ್ತು ಮಾರುತಿ ಮೆಡಿಕಲ್ಸ್ ಮಾಲೀಕರು, ಸಮಾಜ ಸೇವಕರಾದ ಮಹೇಂದ್ರ ಮನೋತ್‌ಜೈನ್ ಅವರು ಉಪಸ್ಥಿತರಿದ್ದು, ಪ್ರಶಸ್ತಿ ಪ್ರದಾನ ಮಾಡುವರು.

ಕನ್ನಡ ನಾಡು ನುಡಿಯಗಡಿ ಸಂರಕ್ಷಣೆಗೆ ತಮ್ಮ ತ್ಯಾಗ, ನಿಷ್ಠೆ ಮತ್ತು ಸೇವೆಯಿಂದ ಮಾದರಿಯಾಗಿರುವ ಡಾ.ಸಂಜೀವಕುಮಾರ ಅತಿವಾಳೆ ಅವರಿಗೆಈ ರಾಷ್ಟ್ರಿಯ ಪ್ರಶಸ್ತಿ ದೊರಕಿರುವುದು ಬೀದರ ಜಿಲ್ಲೆಯವರಿಗೆ ಹೆಮ್ಮೆತಂದಿದೆ.

## ಕನ್ನೇರಿ ಮಠದ ಕಾಡಸಿದ್ದೇಶ್ವರ ವಿರುದ್ಧ ಪ್ರತಿಭಟನೆ

ಬಸವನ ಬಾಗೇವಾಡಿ :ಅ.24:ಕನ್ನೇರಿ ಮಠದ ಕಾಡಸಿದ್ದೇಶ್ವರ ಸ್ವಾಮಿಯ ಹೇಳಿಕೆಯನ್ನು ಖಂಡಿಸಿ ಬಸವನ ಬಾಗೇವಾಡಿಯಲ್ಲಿ ವಿವಿಧ ಸಂಘಟನೆಯ ಭಕ್ತರು ಪ್ರತಿಭಟನೆ ನಡೆಸಿ ಸ್ವಾಮಿಯನ್ನು ಕೂಡಲೇ ಬಂಧಿಸಬೇಕೆಂದು ತಹಶೀಲ್ದಾರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು ಪಟ್ಟಣದ ವಿರಕ್ತಮಠದಲ್ಲಿ ಬಸವ ಭಕ್ತರು ಹಾಗೂ ವಿವಿಧ ಸಂಘಟನೆಯವರು ಜಮಾವಣೆಯಾಗಿ ಕಾಡು ಸಿದ್ದೇಶ್ವರ ಸ್ವಾಮೀಜಿಯ ಭಾವಚಿತ್ರಕ್ಕೆ ಚಪ್ಪಲಿಯ ಹಾರ ಹಾಕಿ ಮೆರವಣಿಗೆಯನ್ನು ಹಲಿಗೆ ಹಚ್ಚಿ ಬಸವೇಶ್ವರ ಸ್ಮಾರಕ ಮಾರ್ಗವಾಗಿ ಪತ್ತಾರ ಓಣಿಯ ಮುಖಾಂತರ ಸ್ವಾಮೀಜಿ ವಿರುದ್ಧ ಘೋಷಣೆ ಘೋಷಣೆಗಳನ್ನು ಕೂಗುತ್ತಾ ಬಸವೇಶ್ವರ ವೃತ್ತಕ್ಕೆ ಆಗಮಿಸಿ ಕಾಡು ಸಿದ್ದೇಶ್ವರ ಸ್ವಾಮೀಜಿಯ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು ಸಂದರ್ಭದಲ್ಲಿ ಸ್ಥಳೀಯ ಮಠದ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ ಕರ್ನಾಟಕ ಸರಕಾರ ಬಸವಣ್ಣನನ್ನು ಸಂಸ್ಕೃತಿಕ ನಾಯಕನೆಂದು




ಘೋಷಣೆ ಮಾಡಿದರೆ ಸಾಲದೆಂದು ಮಠಾಧೀಶರ ಒಕ್ಕೂಟದಿಂದ ಬಸವ ಸಂಸ್ಕೃತಿ ಅಭಿಯಾನವನ್ನು ಬಸವ ಜನ್ಮಸ್ಥಳ ಬಸವನ ಬಾಗೇವಾಡಿಯಿಂದ ಪ್ರಾರಂಭವಾಗಿ ಒಂದು ತಿಂಗಳ ಪರಿಯಂತ ಅನೇಕ ಜಿಲ್ಲೆಗಳನ್ನು ಸಂಚರಿಸಿ ಬಸವತತ್ವ ಅವನ ಆದರ್ಶಗಳನ್ನು ಸಮಾಜಕ್ಕೆ ತಿಳಿಪಡಿಸುವ ಮೂಲಕ ಅಕ್ಟೋಬರ್ ಐದರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಮುಖ್ಯಮಂತ್ರಿಯವರಿಂದ ಸಮಾರೋಪ ಕಾರ್ಯಕ್ರಮ ನೆರವೇರಿತು ಈ ಕಾರ್ಯಕ್ರಮ ಯಶಸ್ವಿಯಾಗಿದ್ದನ್ನು ಕಂಡು ಕಾಡಸಿದ್ದೇಶ್ವರ ಸ್ವಾಮಿಜಿಗೆ ಹೊಟ್ಟೆ ಉರಿ ಇದನ್ನು ಸಹಿಸದೆ

ಒಕ್ಕೂಟದ ಸ್ವಾಮಿಜಿ ಅವರಿಗೆ ಬಸವ ಭಕ್ತರಿಗೆ ಅವಾಚ್ಯ ಶಬ್ದಗಳನ್ನು ಮಾತನಾಡಿರುವ ಕಾಡಸಿದ್ದೇಶ್ವರ ಸ್ವಾಮಿಯನ್ನು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿದರು ಮಸಬಿನಾಳದ ಮಠದ ಸಿದ್ಧರಾಮ ಸ್ವಾಮೀಜಿ ಮಾತನಾಡಿ ಈ ಕನ್ನೇರಿ ಮಠದ ಸ್ವಾಮೀಜಿಯ ಬುದ್ಧಿ ಬ್ರಮಣೆಯಾಗಿದೆ ಸ್ವಾಮಿ ಆಗಿಲಿಕ್ಕೆ ಅಯೋಗ್ಯ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳನ್ನು ಮಾತನಾಡಿರುವ ಈ ಸ್ವಾಮಿ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಬಾಗೇವಾಡಿಗೆ ಬಂದರೆ

ನಾವೇ ಚಪ್ಪಲಿ ಯಲ್ಲಿ ಹೊಡೆದು ಬುದ್ಧಿ ಕಲಿಸುತ್ತೇವೆ ಎಂದರು ಸಾಹಿತಿ ಲರು ಗೊಳಸಂಗಿ ಮಾತನಾಡಿ ದರು ಅದೇ ರೀತಿಯಾಗಿ ಬಸವ ಸೈನ್ಯದ ಸಂಸ್ಥಾಪಕ ಅಧ್ಯಕ್ಷರಾದ ಶಂಕರಗೌಡ ಬಿರಾದಾರ್ ಸಂಗಮೇಶ ಓಲೆಕಾರ್ ನ್ಯಾಯವಾದಿ ವೀರಣ್ಣ ಮರ್ತುರ್ ಸಂಗನಗೌಡ ಚಿಕ್ಕೊಂಡೆ ಸ್ವಾಮಿ ವಿರುದ್ಧ ಮಾತನಾಡಿದರು ಸಂದರ್ಭದಲ್ಲಿ ವಿವೇಕಾನಂದ ಕಲ್ಯಾಣ್ ಶೆಟ್ಟಿ ಎಂ ಜಿ ಆದಿ ಗುಂಡ ಬಸವರಾಜ್ ಹಾರಿವಾಳ ಸುರೇಶಗೌಡ ಪಾಟೀಲ ಸಂಕನಗೌಡ ಪಾಟೀಲ ಶೇಖರ ಗೊಳಸಂಗಿ ಬಸವರಾಜ ಗೊಳಸಂಗಿ ಮುರಿಗೆಪ್ಪ ಚಿಂಚೋಳಿ ಆರ್ ಜಿ ಅಳಗಿ ಎಸ್ ಎಸ್ ಜಳಕಿ ಎಸ್ ಹೆಚ್ ಬಿರಾದಾರ ಸಿ ಎಲ್ ಮರಾಳ ಶರಣಪ್ಪ ಮಾದರ ಪ್ರಭಾಕರ್ ಕೆಡದ ಮಲ್ಲಿಕಾರ್ಜುನ ಎಸ ದೇಗಿನಳ ಹಡಪದ ಮಹಾಂತೇಶ್ ಹಂಜಗಿ ಎಸ್ ದೇಗಿನಾಳ ಎಸ್ ಎಸ್ ಸೋಮನ ಕಟ್ಟಿ ಪ್ರಶಾಂತ್ ಮುಂಜಾನೆ ಶೇಖರ್ ಗೌಡ ಪಾಟೀಲ ಬಸಮ್ಮ ಪಡಿಶೆಟ್ಟಿ ಕಸ್ತೂರಿ ಕಪ್ಪನ್ನವರ್ ಶೋಭಾ ರೇವರ ಕರ ಸಾವಿತ್ರಿ ಅರಸಿನಾಳ ಕಮಲವ್ವ ಸಜ್ಜನ ಯಮುನಕ್ಕ ಸಜ್ಜನ ಶಾಂತ ಬಸರಕೋಡ ಯಮುನಕ್ಕ ಅಂಬಳ ನೂರ ಸಾವಿರಾರು ಬಸವ ಭಕ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು

## ಸರಕಾರಿ ಇಂಜಿನೀಯರಿಂಗ ಕಾಲೇಜಗೆ ಒಂದು ಲಕ್ಷ ಮೌಲ್ಯದ ಪುಸ್ತಕ ದೇಣಿಗೆ–ಸುರೇಶ ಚನ್ನಶೆಟ್ಟಿ

ಬೀದರ.ಅ.24:ಬೀದರನಲ್ಲಿ ಸರಕಾರಿ ಇಂಜಿನೀಯರಿಂಗ್ ಕಾಲೇಜು ತಾಂತ್ರಿಕ ಮಕ್ಕಳ ಶಿಕ್ಷಣ ಹಿತದೃಷ್ಟಿಯಿಂದ ಪ್ರದೀಪ ಪೋಲಾ ಅವರಿಂದ ತಾಂತ್ರಿಕ ಪುಸ್ತಕಗಳು ದೇಣಿಗೆ ನೀಡಿದ್ದು ಇದೊಂದು ಜಿಲ್ಲೆಯಲ್ಲಿ ಎಲ್ಲರಿಗೂ ಮಾದರಿಯಾಗಿದೆ ಎಂದು ಜಿಲ್ಲಾ ಕ.ಸಾ.ಪ. ಅಧ್ಯಕ್ಷರಾದ ಸುರೇಶ ಚನ್ನಶೆಟ್ಟಿ ನುಡಿದರು.

ಬೀದರ ಸರಕಾರಿ ಇಂಜಿನಿಯರಿಂಗ್ ಕಾಲೇಜನಲ್ಲಿ ಕಂಪ್ಯೂಟರ್ ಸೈನ್ಸ್, ಸಿವಿಲ್, ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್, ಅರ್ಟಿಫಿಸಿಯಲ್ ಇಂಟೆಲಿಜೆನ್ಸ್ ಕೋರ್ಸ್‌ಗಳ ಮಕ್ಕಳಿಗೆ ಪುಸ್ತಕ ತುಂಬಾ ಅನಿವಾರ್ಯವಾಗಿತ್ತು, ಅನೇಕ ಬಡ ಮಕ್ಕಳು ಕಲಿಯುವುದಕ್ಕೆ ಆರ್ಥಿಕ ತೊಂದರೆಯಾಗುವುದು ಕಷ್ಟ. ಇಂಜಿನಿಯರಿಂಗ್ ಕೋರ್ಸ್ ಓದಲು ಹೆಚ್ಚಿನ ಬೆಲೆಯುಳ್ಳ ಪುಸ್ತಕ ಖರೀದಿಸುವುದು ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳಿಗೆ ಸಂಕಷ್ಟ ಎದುರಾಗುವುದು ಸಹಜ.ಇಂಥ ಪರಿಸ್ಥಿತಿಯನ್ನು ಅರಿತ ಪ್ರದೀಪ ಪೋಲಾ ನಿವೃತ್ತ ಐಟಿಐ ಸಿಬ್ಬಂದಿ ತನ್ನ ಮಗನಾದ ಅಕ್ಷಯ ಪೋಲಾ ಓದು ಮುಗಿಸಿ ಬಾಸ್ಕೊ ಕಂಪನಿಯಲ್ಲಿ ನೌಕರಿ ಪಡೆದಿದ್ದಾರೆ. ಅವರು ಓದಿರುವ ಎಲ್ಲಾ ಪುಸ್ತಕಗಳು ಇಂದು ಸಮರ್ಪಿಸುತ್ತಿರುವುದು ಶ್ಲಾಘನೀಯ.

ತನ್ನ ಮನೆಯಲ್ಲಿ ಅನೇಕ ವರ್ಷಗಳಿಂದ ಸಂಗ್ರಹಿಸಲ್ಪಟ್ಟ ಇಂಜಿನೀಯರಿಂಗ್ ಪುಸ್ತಕ ಇಂದು ದೇಣಿಗೆ ನೀಡುತ್ತಿರುವುದು ಅತ್ಯಂತ ಸಂತಸದ ಜೊತೆಗೆ ಇದು ಇಡೀ ಜಿಲ್ಲೆಗೆ ಮಾದರಿಯಾಗಿದ್ದು, ಎಲ್ಲ ಪಾಲಕರು ಪ್ರದೀಪ ಪೋಲಾ ರೀತಿಯಲ್ಲಿಯೇ ಚಿಂತನೆ ಮಾಡಿದರೆ ಬಡ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ ಎಂದು ನುಡಿದರು.

ಡಾ ದೇವೇಂದ್ರ ಹಂಚೆ ಪ್ರಾಚಾರ್ಯರು ಎಲ್ಲ ಪುಸ್ತಕಗಳು ಅವಲೋಕಿಸಿ ಅದರಲ್ಲಿ ಅಚಾನಕ್ಕಾಗಿ ಒಂದು ಪುಸ್ತಕ ಎತ್ತಿಕೊಂಡು ನೋಡಿ ಅದರ ಬೆಲೆ ರೂ. 21000/ ಗಮನಿಸಿ, ಇದು ದೊಡ್ಡ ಉಪಕಾರ, ಅಕ್ಷಯ ಪ್ರದೀಪ ಪೋಲಾ ಕೊಡುಗೆಯಾಗಿದೆ. ನಮ್ಮಲ್ಲಿ ಎಲ್ಲ ಸೆಮಿಸ್ಟರ್ ಒಳಗೊಂಡಂತೆ ಒಟ್ಟು 709 ವಿದ್ಯಾರ್ಥಿ/ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದಾರೆ. ಸುಮಾರು ದಿವಸಗಳಿಂದ ಇಂಥ ಪುಸ್ತಕ ಖರೀದಿಸಲು ಪ್ರಸ್ತಾವನೆ ಸಲ್ಲಿಸುವ ತವಕದಲ್ಲಿದ್ದೆ, ಜೊತೆಗೆ ಸರಕಾರದ ನಿಯಮಗಳನ್ನು ಗಮನಿಸಿದರೆ ಒಂದು ಲಕ್ಷ ಮೊತ್ತದ ಪುಸ್ತಕಬೇಕಾದರೆ ತಕ್ಷಣ ಸಿಗುವುದು ಬಲು ಕಷ್ಟ ಜೊತೆಗೆ ನೂರಾರು ಕಾನೂನಿನ ತೊಡಕುಂಟಾಗುವುದು ಸಹಜ. ಆದರೆ ಕನಸು ಮನಸ್ಸಿನಲ್ಲೂ ನಾವೆಂದು ವಿಚಾರ ಸಹ ಮಾಡಿಲ್ಲ ಇಷ್ಟು ಪುಸ್ತಕ ನಮಗೆ ಸಿಗಬಹುದೆಂಬ ಕಲ್ಪನೆ ಇರಲಿಲ್ಲ. ಆದರೂ ಟೋಕರೆ ಸರ್ ನಿವೃತ್ತಿ ಆದ ಮೇಲೂ ಅನೇಕ ಸಂಘ ಸಂಸ್ಥೆಗಳ ಸಂಪರ್ಕ ಇಟ್ಟುಕೊಂಡು ಜಿಲ್ಲೆಯ ತಾಂತ್ರಿಕ ವರ್ಗದ ಮಕ್ಕಳಿಗೆ ಸಹಕರಿಸುವ ಮನಸ್ಸುಳ್ಳ ಶಿವಶಂಕರ ನಮಗೆಲ್ಲ ಹಿರಿಯರು. ಇವರು ಇದೇ ಪುಸ್ತಕ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಿಗೆ ಕೊಡಬಹುದಾಗಿತ್ತು, ಆದರೆ ಸರಕಾರಿ ಇಂಜಿನಿಯರಿಂಗ್ ಕಾಲೇಜ್ ಮಕ್ಕಳಿಗೆ ಸಹಕಾರ ಮಾಡುವ ಮನೋಭಾವ ಒಂದು ಅಪರೂಪ ಸನ್ನಿವೇಶ ಇದಾಗಿದೆ. ಇಂಥ ಅನೇಕ ಹಿರಿಯರು, ಶೈಕ್ಷಣಿಕ ಪ್ರಗತಿಪರ ಚಿಂತಕರು, ಕನ್ನಡ ಸಾಹಿತ್ಯ ಪರಿಷತ್ತು ನವರು ಸಹಕರಿಸಿದರೆ ಇದೊಂದು ಮಾದರಿ ಕಾಲೇಜು ಮಾಡಲು ಶ್ರಮಿಸಲು ಕಟಿಬದ್ಧನಾಗಿರುವೆನು ಎಂದು ಹೇಳಿ ದೇಣಿಗೆ ನೀಡಿದ ಪ್ರದೀಪ ಪೋಲಾ ಹಾಗೂ ಅಕ್ಷಯ ಪೋಲಾ ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಮೊದಲಿಗೆ ಡಾ ರಿಕ್ಕೆ ವಿಜಯಕುಮಾರ ಸ್ವಾಗತಿಸಿ, ಡಾ ಬಾಬುರಾವ ವಂದಿಸಿದರು.



# ಯುವಕರು ಎಚ್ಚರಿಕೆ ವಹಿಸಬೇಕು:ಶಾಸಕ ಎಂ.ವೈ.ಪಾಟೀಲ್




ಕರಜಗಿ:ಅ.24:ಜಿಲ್ಲಾ ಪೊಲೀಸ್ ಇಲಾಖೆಯ ಸೈಬರ್ ಅಪರಾಧ ವಿಭಾಗದ ವತಿಯಿಂದ ಅಫಜಲಪುರ ಪಟ್ಟಣದ ಮಹಾಂತಮ್ಮ ಪಾಟೀಲ್ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಸೈಬರ್ ಅಪರಾಧ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅಫ್‌ಜಲಪುರ ಶಾಸಕ ಎಂ.ವೈ. ಪಾಟೀಲ್ ಅವರು, ಕಂಪ್ಯೂಟರ್ ಹಾಗೂ ಮೊಬೈಲ್ ಬಳಕೆಯಿಂದ ಅನೇಕ ಸೌಲಭ್ಯಗಳು ಲಭಿಸಿದರೂ, ಅದರ ದುರುಪಯೋಗದಿಂದ ಸೈಬರ್ ಅಪರಾಧಗಳು ಹೆಚ್ಚಾಗಿವೆ. ಇಂದಿನ ದಿನಗಳಲ್ಲಿ ಬ್ಯಾಂಕ್ ವಂಚನೆ, ಹಣಕಾಸು ಮೋಸಗಳು ಹಾಗೂ ಮಹಿಳೆಯರ ಬ್ಲ್ಯಾಕ್‌ಮೇಲ್ ಪ್ರಕರಣಗಳು ಹೆಚ್ಚುತ್ತಿರುವುದು ಕಳವಳಕಾರಿ ವಿಚಾರ. ಇಂಟರ್ನೆಟ್ ಉಪಯೋಗಿಸುವಾಗ ಜಾಗ್ರತೆ ಅಗತ್ಯ, ಯುವಕರು ಎಚ್ಚರಿಕೆಯಿಂದ ನಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಸೈಬರ್ ವಂಚನೆಗಳ ಕುರಿತು ವಿಶೇಷ ಉಪನ್ಯಾಸ ನೀಡಿದ ಜಿಲ್ಲಾ ಸೈಬರ್ ಪೊಲೀಸ್ ಇಲಾಖೆಯ ಸಹಾಯಕ ಪೊಲೀಸ್ ಅಧಿಕ್ಷಕ ಬಸವೇಶ್ವರ ಹೀರಾ ಅವರು,ಪ್ರತಿಯೊಬ್ಬ ಇಂಟರ್ನೆಟ್ ಬಳಕೆದಾರರೂ ತಮ್ಮ ಎಟಿಎಂ ಕಾರ್ಡ್, ಸಿವಿವಿ, ಯುಪಿಐ ಪಿನ್, ಓಟಿಪಿ ಅಥವಾ ಎಂಪಿನ್ ವಿವರಗಳನ್ನು ಯಾರೊಂದಿಗೆ ಹಂಚಿಕೊಳ್ಳಬಾರದು.

ಅಪರಿಚಿತರಿಂದ ಬರುವ ಎಸ್‌ಎಂಎಸ್, ವಾಟ್ಸಾಪ್ ಅಥವಾ ಇಮೇಲ್ ಲಿಂಕ್‌ಗಳನ್ನು ಯಾವುದೇ ಕಾರಣಕ್ಕೂ ಕ್ಲಿಕ್ ಮಾಡಬಾರದು" ಎಂದು ಎಚ್ಚರಿಸಿದರು.ಅವರು ಮುಂದುವರೆದು, ಗೂಗಲ್‌ನಲ್ಲಿ ಕಂಡುಬರುವ ಕಸ್ಟಮರ್ ಕೇರ್ ಸಂಖ್ಯೆಗಳು ಅಥವಾ ಇಮೇಲ್ ವಿಳಾಸಗಳ ನೈಜತೆಯನ್ನು ದೃಢಪಡಿಸಿದ ಬಳಿಕವೇ ಬಳಸಬೇಕು. ವರ್ಕ್ ಫ್ರಮ್ ಹೋಂ ಅಥವಾ ಆನ್ಲೈನ್ ಉದ್ಯೋಗ ನೀಡುವ ಜಾಹೀರಾತುಗಳನ್ನು ನಂಬಬಾರದು. ಅಪರಿಚಿತ ಎಪಿಕೆ ಫೈಲ್‌ಗಳನ್ನು ಡೌನ್‌ಲೋಡ್ ಮಾಡಬಾರದು.ಇತ್ತೀಚಿನ ದಿನಗಳಲ್ಲಿ ಮುಂಬೈ, ದೆಹಲಿ ಹಾಗೂ ವಿದೇಶಗಳಿಂದ ಕ್ರೈಂ ಬ್ರಾಂಚ್ ಹೆಸರಿನಲ್ಲಿ ಡ್ರಗ್ಸ್ ಪಾರ್ಸೆಲ್ ಅಥವಾ ಸೈಬರ್ ಅರೆಸ್ಟ್ ಎಂದು ಬೆದರಿಸುವ ಪ್ರಕರಣಗಳು ಹೆಚ್ಚಾಗಿವೆ,

ಇಂತಹ ವಂಚನೆಗಳಿಂದ ದೂರ ಇರಬೇಕು ಎಂದು ಎಚ್ಚರಿಕೆ ನೀಡಿದರು. ಕಾರ್ಯಕ್ರಮದಲ್ಲಿ ತಹಶೀಲ್ದಾರ ಸಂಜೀವ್ ಕುಮಾರ್ ದಾಸರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಪೂಜಾರಿ, ಮಾಜಿ ಪಂಚಾಯತ್ ಉಪಾಧ್ಯಕ್ಷ ಶಿವಾನಂದ ಗಾಡಿ ಸೌಕಾರ್, ಶಾಸಕರ ಆಪ್ತ ಕಾವ್ಯದರ್ಶಿ ರಾಹುಲ್, ಹಾಗೂ ಮಹಾಂತಮ್ಮ ಪಿ.ಯು. ಕಾಲೇಜಿನ ಪ್ರಾಂಶುಪಾಲ ಎಂ. ವೀರಣ್ಣಗೌಡ ವೇದಿಕೆ ಮೇಲೆ ಉಪಸ್ಥಿತರಿದ್ದರು.

# ಸ್ಯಾಟ್‌ಲೈಟ್ ಬಸ್ ನಿಲ್ದಾಣ: ನಿವೇಶನಕ್ಕಾಗಿ ಸ್ಥಳ ಪರಿಶೀಲನೆ

ಕಲಬುರಗಿ,ಅ.24: ನಗರದಲ್ಲಿ ಸುಸಜ್ಜಿತ ಹಾಗೂ ಅತ್ಯಾಧುನಿಕ ರೀತಿಯ ಸ್ಯಾಟಲೈಟ್ ಬಸ್ ನಿಲ್ದಾಣ ನಿರ್ಮಾಣ ಮಾಡುವ ಉದ್ದೇಶದೊಂದಿಗೆ ಈಚೆಗೆ ಬೆಂಗಳೂರಲ್ಲಿ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಐಟಿ,ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಅಧಿಕಾರಿಗಳ ಸಭೆಯ ನಂತರ ಇದೀಗ ಮಹತ್ವದ ಬೆಳವಣಿಗೆಯಲ್ಲಿ ಈ ನಿಲ್ದಾಣಗಳ ನಿರ್ಮಾಣಕ್ಕಾಗಿ ಸೂಕ್ತ ನಿವೇಶನಕ್ಕಾಗಿ ಶಾಸಕರದ ಅಲ್ಲಂಪ್ರಭು ಪಾಟೀಲ್, ಕೆಕೆಆರ್‌ಟಿಸಿ ಅಧ್ಯಕ್ಷರಾದ ಅರುಣಕುಮಾರ್ ಪಾಟೀಲ್ ಹಾಗೂ ಅಧಿಕಾರಿಗಳು ಕಲಬುರಗಿ ಮಹಾನಗರದ ನಾಲ್ಕೂ ದಿಕಕುಗಳಲ್ಲಿ ಲಭ್ಯವಿರುವ ನಿವೇಶನಕ್ಕಾಗಿ ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿದರು.

ನಗರ ಹೊರ ವಲಯದ ಆಳಂದ ಚೆಕ್ ಪೋಸ್ಟ್ ಕೋಟನೂರ, ಹುಮನಾಬಾದ ರಸ್ತೆ ಮತ್ತು ಸೇಡಮ್ ರಸ್ತೆಯ ವಿಶ್ವವಿದ್ಯಾಲಯ ಸ್ಯಾಟಲೈಟ್ ಬಸ್ ನಿಲ್ದಾಣ ನಿರ್ಮಾಣಕ್ಕೆ ಸ್ಥಳ ಪರಿಶೀಲನೆ ಮಾಡಲಾಯಿತು. ಇಲ್ಲೆಲ್ಲಾ ಕ್ರಮವಾಗಿ 3 ಅಥವಾ 2 ಎಕರೆ ನಿವೇಶನ ಸೂಕ್ತವಾಗಿರುವಂತಹದ್ದನ್ನು ಪರಿಶೀಲನೆ ಮಾಡಲಾಯ್ತು. ಗುವಿವಿ ಕುಲಪತಿ ಶಶಿಕಾಂತ್ ಉಡಿಕೇರಿ, ಕೃಷಿ ವಿಜ್ಞಾನ ಕೇಂದ್ರದ ಅಧಿಕಾರಿಗಳು, ಕೋಟ್ನೂರ್ ಕೃಷಿ ಕೇಂದ್ರದ ಅಧಿಕಾರಿಗಳು ಸೇರಿದಂತ ಅನೇಕರಿದ್ದರು.

ಈಗಾಗಲೇ ಎರಡು ಮೂರು ಸ್ಥಳಗಳಲ್ಲಿ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ ಅಗತ್ಯವಿರುವ ಸ್ಥಳವನ್ನು ಗುರುತಿಸಲಾಗಿದ್ದು, ಸೂಕ್ತವೆನಿಸುವ ಜಾಗದಲ್ಲಿ ಉದ್ದೇಶಿತ ಬಸ್ ನಿಲ್ದಾಣ ನಿರ್ಮಿಸಲು ಸಂಬಂಧಪಟ್ಟ ಇಲಾಖೆಗಳಿಗೆ ಪ್ರಸ್ತಾವನೆ ಸಲ್ಲಿಸಲು ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ಶಾಸಕರು, ಅಧ್ಯಕ್ಷರು ಸೂಚಿಸಿದರು.ಪ್ರಗತಿಯತ್ತ ದಾಪುಗಾಲು ಇಡುತ್ತಿರುವ ಕಲಬುರಗಿ ನಗರಕ್ಕೆ ಉದ್ದೇಶಿತ ಸ್ಯಾಟಲೈಟ್ ಬಸ್ ನಿಲ್ದಾಣವು ಅಭಿವೃದ್ಧಿಗೆ ವೇಗ ನೀಡಲಿದೆ ಎಂದು ಶಾಸಕರಾದ ಅಲ್ಲಂಪ್ರಭು ಪಾಟೀಲರು ಅಭಿಪ್ರಾಯಪಟ್ಟರು.ಕಲಬುರಗಿ ಕೃಷಿ, ಪಶುಸಂಗೋಪನೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧಿಕಾರಿಗಳು ಸ್ಥಳ ಪರಿಶೀಲನೆಯ ಕಾರ್ಯದಲ್ಲಿ ಶಾಸಕರಾದ ಅಲ್ಲಂಪ್ರಭು ಪಾಟೀಲ್, ಕೆಕೆಆರ್ ಟಿಸಿ ನಿಗಮದ ಅಧ್ಯಕ್ಷರಾದ ಅರುಣಕುಮಾರ ಪಾಟೀಲ್, ಎಮ್.ಡಿ. ಬಿ. ಸುಶೀಲಾ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.



# ತಾಲೂಕ ಆಡಳಿತದಿಂದ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಆಚರಣೆ

ಕೊಲ್ಹಾರ:ಅ.24: ಪಟ್ಟಣದ ತಹಸಿಲ್ದಾರ ಕಾರ್ಯಾಲಯದಲ್ಲಿ ಗುರುವಾರ ತಾಲೂಕ ಆಡಳಿತ ಹಾಗೂ ಕೊಲ್ಹಾರ ತಾಲೂಕ ಲಿಂಗಾಯತ ಪಂಚಮಸಾಲಿ ಸಮಾಜದ ಸಹ ಯೋಗದಲ್ಲಿ ವೀರರಾಣಿ ಕಿತ್ತೂರು ಚೆನ್ನಮ್ಮ ಜಯಂತಿಯನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಯಿತು.



ತಹಶೀಲ್ದಾರ ಸಂತೋಷ ಮ್ಯಾಗೇರಿ ವೀರರಾಣಿ ಕಿತ್ತೂರು ಚೆನ್ನಮ್ಮ ಭಾವಚಿತ್ರಕ್ಕೆ ಪುಷ್ಪಾರ್ಚನೆಗೆ ಸಲ್ಲಿಸಿ ಮಾತನಾಡಿ, ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರೊಂದಿಗೆ ಯುದ್ಧ ಮಾಡಿ ದೇಶದಲ್ಲಿ ಸ್ವಾತಂತ್ರದ ಕಿಚ್ಚನ್ನು ಮೊಟ್ಟ ಮೊದಲಿಗೆ ಹಚ್ಚಿದವಳು ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕಿ ವೀರ ರಾಣಿ ಕಿತ್ತೂರು ಚೆನ್ನಮ್ಮ ಮೊದಲಿಗರು. ಬ್ರಿಟಿಷರೊಂದಿಗೆ ಕಪ್ಪು ಕಾಣಿಕೆ ವಿಚಾರ ಬಂದಾಗ ಯುದ್ಧ ಮಾಡಿ ಬ್ರಿಟಿಷರಿಗೆ ಸೋಲಿನ ರುಚಿಯನ್ನು ತೋರಿಸಿದರು. ಬ್ರಿಟಿಷರು ಇವಳ ಶೌರ್ಯ. ತ್ಯಾಗ ಸಾಹಸವನ್ನು ಕಂಡು ಬೆಚ್ಚಿದ್ದರು. ಕಿತ್ತೂರು ಒಂದು ಚಿಕ್ಕ ಸಂಸ್ಥಾನವಾದರೂ ಕೂಡ ಅದನ್ನು ಉಳಿಸಿಕೊಳ್ಳಲು ದೊಡ್ಡ ಹೋರಾಟವನ್ನು ಮಾಡಿದರು. ನಮ್ಮ ದೇಶದ ಅನ್ನವನ್ನು ಉಂಡು ಚನ್ನಮ್ಮ ತಾಯಿಗೆ ಹಿತ ಶತ್ರುಗಳಾಗಿ ಯುದ್ಧದ ಸಂದರ್ಭದಲ್ಲಿ ಮದ್ದು ಗುಂಡುಗಳಿಗೆ ಸೆಗಣಿ ತುಂಬಿ ಅವಳನ್ನು ಶಕ್ತಿಹೀನನಾಗಿ ಮಾಡಿ ಬ್ರಿಟಿಷರ ಬಂಧನಕ್ಕೆ ಒಳಪಡವಲಾಯಿತು.

ಇವತ್ತಿಗೂ ದೇಶದಲ್ಲಿ ನಮ್ಮ ಜೊತೆ ಹಿತ ಶತ್ರುಗಳಿರುತ್ತಾರೆ ಬಹಳ ಎಚ್ಚರಿಕೆಯಿಂದ ನಾವು ಇರಬೇಕಾಗಿದೆ ಚೆನ್ನಮ್ಮನ ಆಚಾರ ವಿಚಾರ ನಡೆ-ನುಡಿಗಳನ್ನು ಇಂದಿನ ಯುವಕರಿಗೆ ತಿಳಿಸಬೇಕಾಗಿದೆ. ಚೆನ್ನಮ್ಮ ಹಾಕಿ ಕೊಟ್ಟಂತ ಮಾರ್ಗದಲ್ಲಿ ನಾವೆಲ್ಲರೂ ನಡೆಯೋಣ ಎಂದರು. ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ವೀರೇಶ ಹಟ್ಟಿ ಮಾತನಾಡಿ, ಬ್ರಿಟಿಷರೊಂದಿಗೆ ಮೊಟ್ಟ ಮೊದಲನೇ ಯುದ್ಧವನ್ನು ಗೆದ್ದ ಚೆನ್ನಮ್ಮ ಲಾರ್ಡ್ ಡಾಲ್ ಹೌಸಿ ಜಾರಿಗೆ ತಂದ ದತ್ತ ಮಕ್ಕಳಿಗೆ ಹಕ್ಕಿಲ್ಲ ಎಂಬ ಕಾನೂನನ್ನು ವಿರೋಧಿಸಿದ್ದಳು. ಚನ್ನಮ್ಮನ ಶೌರ್ಯ ತ್ಯಾಗ ನಮ್ಮೆಲ್ಲರಿಗೂ ಮಾದರಿ ಎಂದರು.

ಪಂಚಮಸಾಲಿ ಸಮಾಜದ ಮುಖಂಡ ಸಂತೋಷ ಚನಗೊಂಡ ಮಾತನಾಡಿ, ಇಂದಿನ ಮಕ್ಕಳಿಗೆ ಚೆನ್ನಮ್ಮನ ದೇಶಭಕ್ತಿ ಹಾಗೂ ಆದರ್ಶವನ್ನು ತುಂಬಬೇಕಾಗಿದೆ. ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ಗೆದ್ದ ದಿನವನ್ನು ತನ್ನ ಜಯಂತಿಯನ್ನಾಗಿ ಆಚರಿಸದೆ ವಿಜಯೋತ್ಸವದ ರೂಪದಲ್ಲಿ ಆಚರಣೆ ಮಾಡಿ ಎಂದಿದ್ದಳು. ಅದರಂತೆ ಇಂದು ಚೆನ್ನಮ್ಮನ 247ನೇ ಜಯಂತೋತ್ಸವ ಹಾಗೂ 201ನೇ ವಿಜಯೋತ್ಸವವನ್ನು ದೇಶಾದ್ಯಂತ ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ ಎಂದರು. ಬ್ರಿಟಿಷರಿಗೆ ಸಿಂಹ ಸ್ವಪ್ನ ವಾಗಿದ್ದ ಚೆನ್ನಮ್ಮ ಅವರ ಶಕ್ತಿಯನ್ನು ಅಡಗಿಸಿದ್ದಳು. ಮಹಾನ ವ್ಯಕ್ತಿಗಳನ್ನ ನಾವು ಜಾತಿ ಧರ್ಮದಿಂದ ನೋಡಿದಾಗ ಅವರು ಬಹಳ ಚಿಕ್ಕವರಾಗುತ್ತಾರೆ ಆದರೆ ಅವರ ಸಾಧನೆ ಮತ್ತು ಇತಿಹಾಸವನ್ನು ನೋಡಬೇಕಾಗಿದೆ ಎಂದರು. ಮಕ್ಕಳಿಗೆ ಶೈಕ್ಷಣಿಕವಾಗಿ ಕಿತ್ತೂರು ಚೆನ್ನಮ್ಮನ ಇತಿಹಾಸವನ್ನು ತಿಳಿಸಬೇಕಾಗಿದೆ ಸರ್ಕಾರ ಇದರ ಬಗ್ಗೆ ಆಲೋಚನೆಯನ್ನು ಮಾಡಬೇಕು ಎಂದರು.ವೀರರಾಣಿ ಕಿತ್ತೂರು ಚೆನ್ನಮ್ಮನ 247ನೇ ಜಯತ್ಯೋತ್ಸವ ಹಾಗೂ 201ನೇ ಕಿತ್ತೂರು ವಿಜಯೋತ್ಸವವನ್ನು ಬಹಳ ಸಡಗರದಿಂದ ಆಚರಿಸಲಾಯಿತು.

# ಸಂಸದರ ನವೀಕೃತ ಕಚೇರಿ ಉದ್ಘಾಟನೆ:ವಿಮಾನಯಾನ ಸಚಿವರ ಅಧ್ಯಕ್ಷತೆಯಲ್ಲಿ ಅ.30ಕ್ಕೆ ಸಭೆ:ರಾಧಾಕೃಷ್ಣ ದೊಡ್ಡಮನಿ

ಕಲಬುರಗಿ,ಅ.24: ಕೇಂದ್ರದ ನಾಗರಿಕ ವಿಮಾನಯಾನ ಸಚಿವರ ಅಧ್ಯಕ್ಷತೆಯಲ್ಲಿ ಇದೇ ಅಕ್ಟೋಬರ್ 30ಕ್ಕೆ ಬೆಂಗಳೂರಿನಲ್ಲಿ ರಾಜ್ಯದ ಸಂಸದರ ಸಭೆ ನಡೆಯಲಿದ್ದು, ಅಲ್ಲಿ ಕಲಬುರಗಿ ವಿಮಾನ ನಿಲ್ದಾಣದಿಂದ ಸ್ಥಗಿತಗೊಂಡಿರುವ ವಿಮಾನಗಳ ಕಾರ್ಯಾಚರಣೆ ಮರು ಆರಂಭಿಸಲು ಪ್ರಸ್ತಾಪ ಮಾಡಲಾಗುವುದು ಎಂದು ಸಂಸದ ರಾಧಾಕೃಷ್ಣ ದೊಡ್ಡಮನಿ ಹೇಳಿದರು.


ಗುರುವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಅವರಣದಲ್ಲಿ ನವೀಕರಣಗೊಂಡ ಕಲಬುರಗಿ ಲೋಕಸಭಾ ಸದಸ್ಯರ ನವೀಕೃತ ಕಚೇರಿಯ ಉದ್ಘಾಟನೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಏಕಾಏಕಿ ಇಲ್ಲಿ ವಿಮಾನಗಳ ಸಂಚಾರ ಸ್ಥಗಿತಗೊಳಿಸಿದ್ದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದ್ದು, ಈ ಬಗ್ಗೆ ಸಭೆಯಲ್ಲಿ ಪ್ರಶ್ನಿಸಲಾಗುವುದು. ಇನ್ನು ಈಗಾಗಲೆ ಈ ಕುರಿತು ಕೇಂದ್ರಕ್ಕೆ ಪತ್ರ ಬರೆದು ಗಮನ ಸೆಳೆಯಲಾಗಿದೆ ಎಂದರು.

ಕಲಬುರಗಿ-ಬೆಂಗಳೂರು ವಂದೇ ಭಾರತ್ ರೈಲು ಸಮಯ ಬದಲಾವಣೆ ಸೇರಿದಂತೆ ಕೇಂದ್ರದ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ನಿರಂತರ ಒತ್ತಡ ಕೆಲಸ ಮಾಡಲಾಗುತ್ತಿದೆ ಎಂದು ಸಂಸದರು ಇದೇ ಸಂದರ್ಭದಲ್ಲಿ ತಿಳಿಸಿದರು.

ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಮಾತನಾಡಿ, ಸಂಸದರ ಕಚೇರಿ ಇಂದು ಉದ್ಘಾಟನೆಯಾಗಿದ್ದರಿಂದ ಸಾರ್ವಜನಿಕರು ಇಲ್ಲಿ ಸಂಸದರನ್ನು ಖುದ್ದಾಗಿ ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಬಹುದಾಗಿದೆ. ಸಾರ್ವಜನಿಕರ ಸ್ನೇಹಿಯಾಗಿ ಕಚೇರಿ ಕಾರ್ಯನಿರ್ವಹಿಸಲಿದೆ ಎಂದರು.

ಕೇಂದ್ರ ಸರ್ಕಾರವು ರಾಜ್ಯಕ್ಕೆ ನಿರಂತರ ಮಲತಾಯಿ ಧೋರಣೆ ಮಾಡುತ್ತಿದೆ. ಈ ಹಿಂದೆಯೂ ವಿಮಾನ ಸಂಚಾರ ಸ್ಥಗಿತಗೊಂಡಾಗ ಮರು ಕಾರ್ಯಾಚರಣೆಗೆ ಅಗ್ರಹಿಸಿದಾಗ ಶುರುವಾಗಿತ್ತು. ಇದೀಗ ಪುನ: ದಿಢೀರನೆ ವಿಮಾನ ಸಂಚಾರ ಸ್ಥಗಿತಗೊಳಿಸಿದೆ.ಇದಲ್ಲದೆ ತೆರಿಗೆ ಹಂಚಿಕೆಯಲ್ಲಿಯೂ ರಾಜ್ಯಕ್ಕೆ ಅನ್ಯಾಯ ಮುಂದುವರೆದಿದೆ ಎಂದರು. ಶಾಸಕರಾದ ಎಂ.ವೈ. ಪಾಟೀಲ, ಅವರು ನವೀಕೃತ ಸಂಸದ ಕಚೇರಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕರಾದ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಕೆ.ಕೆ.ಆರ್.ಟಿ.ಸಿ ಅಧ್ಯಕ್ಷ ಅರುಣಕುಮಾರ ಪಾಟೀಲ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕಲಬುರಗಿ ಕಾಡಾ ಅಧ್ಯಕ್ಷ ಅಬ್ದುಲ್ ರಶೀದ್, ಭೀಮರಾಯನಗುಡಿ ಕಾಡಾ ಅಧ್ಯಕ್ಷ ಬಾಬು ಹೊನ್ನನಾಯಕ್, ಗ್ಯಾರಂಟಿ ಅನುಷ್ಠಾನ ಜಿಲ್ಲಾ ಸಮಿತಿಯ ಅಧ್ಯಕ್ಷೆ ಚಂದ್ರಿಕಾ ಪರಮೇಶ್ವರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜರ್ ಆಲಂ ಖಾನ್, ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್, ಡಿ.ಸಿ. ಬಿ.ಫೌಜಿಯಾ ತರನ್ನುಮ್, ಕೆ.ಕೆ.ಆರ್.ಟಿ.ಸಿ. ಎಂ.ಡಿ ಡಾ.ಬಿ.ಸುಶೀಲಾ, ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಹೆಚ್ಚುವರಿ ಎಸ್.ಪಿ. ಮಹೇಶ ಮೇಘಣ್ಣನವರ ಸೇರಿದಂತೆ ಇತರೆ ಚುನಾಯಿತ ಜನಪ್ರತಿನಿಧಿಗಳು, ಅಧಿಕಾರಿಗಳಿದ್ದರು.





# ಕಲೆಯ ಆತ್ಮ ಪುನರುಜ್ಜೀವನ-ಕಲಬುರಗಿಯಲ್ಲಿ ಮೂರು ದಿನಗಳ ಕೈಗಾರಿಕಾ ಶಿಬಿರ



ಕಲಬುರಗಿ:ಅ.24: ಪ್ರಾದೇಶಿಕ ಕೈಗಾರಿಕೆಗಳ ಸಂರಕ್ಷಣೆ ಮತ್ತು ಪುನರುಜ್ಜೀವನವು ಕೇವಲ ನಮ್ಮ ಕರ್ತವ್ಯವಲ್ಲ ಅದು ನಮ್ಮ ಸಾಂಸ್ಕೃತಿಕ ಹಕ್ಕು, ಎಂದು ಹಲೀಮಾ ಇಂಗ್ಲಿಷ್ ಮೀಡಿಯಂ ಶಾಲೆಯ ಪ್ರಾಂಶುಪಾಲರಾದ ಅಮ್ಜದ್ ಜಾವೇದ್ ಅವರು ಕಲಬುರಗಿಯಲ್ಲಿ ನಡೆದ ಮೂರು ದಿನಗಳ ಕಲಾ ಪ್ರದರ್ಶನ ಮತ್ತು ಜಾಗೃತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಹೇಳಿದರು.

ಈ ಶಿಬಿರವನ್ನು ಭಾರತ ಸರ್ಕಾರದ ವಸ್ತ್ರ ಮಂತ್ರಾಲಯ, ಹಸ್ತಕಲಾ ಅಭಿವೃದ್ಧಿ ಆಯುಕ್ತರ ಕಚೇರಿ ಮತ್ತು ಧಾರವಾಡ ವಲಯದ ಹಸ್ತಕಲಾ ಸೇವಾ ಕೇಂದ್ರಗಳ ಸಹಯೋಗದಲ್ಲಿ ಆಯೋಜಿಸಲಾಗಿತ್ತು.

ಭಾರತದ ಶಾಶ್ವತ ಹಸ್ತಕಲಾ ಪರಂಪರೆಯನ್ನು ಉಳಿಸಿ ಬೆಳೆಸಲು ಮತ್ತು ಯುವ ಮನಸ್ಸುಗಳಲ್ಲಿ ಈ ಕಲೆಗಳ ಬಗ್ಗೆ ಆಸಕ್ತಿ ಮೂಡಿಸಲು ಈ ವೇದಿಕೆ ಜೀವಂತ ಚೇತನವಾಗಿ ಪರಿಣಮಿಸಿತು.

ಹಸ್ತಕಲಾ ಪ್ರಚಾರ ಅಧಿಕಾರಿ ಸುಶಾಂತ ಭೂಯಿನ್ ಅವರು ಶಿಬಿರದ ಉದ್ದೇಶ ಮತ್ತು ಅದರ ಮಹತ್ವವನ್ನು ವಿವರಿಸಿದರು. ಪ್ರಸಿದ್ಧ ಕಲಾವಿದ ಹಾಗೂ ಸಂಪನ್ಮೂಲ ವ್ಯಕ್ತಿ ರಹಮಾನ್ ಪಟೇಲ್ ಅವರು ವಿವಿಧ ಹಸ್ತಕಲೆಗಳ ವೈಶಿಷ್ಟ್ಯತೆ, ನೈಪುಣ್ಯ ಮತ್ತು ಪ್ರಾದೇಶಿಕ ಸೌಂದರ್ಯವನ್ನು ಕವಿತ್ವಮಯ ಶೈಲಿಯಲ್ಲಿ ವಿವರಿಸಿ ಶ್ರೋತೃಗಳನ್ನು ಆಕರ್ಷಿಸಿದರು.

ಈ ಸಂದರ್ಭದಲ್ಲಿ ಪ್ರಮುಖ ಕಲಾವಿದರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಸೂರಪುರ ಮಿನಿಯೇಚರ್ ಪೈಂಟಿಂಗ್ ಕ್ಷೇತ್ರದ ಪಂಡಿತರು ಜಗದೀಶ ಕಂಬಳೆ ಮತ್ತು ವಿನೋದ ರಘುವೀರ್, ಮಣ್ಣು ಶಿಲ್ಪಕಲೆ ತಜ್ಞ ವಿಶ್ವೇಶ್ವರಯ್ಯ ಟಿ.ಎನ್., ಮರದ ಕೆತ್ತನೆಯ ನಿಪುಣ ಗಾಯತ್ರಿ ಶಿಲ್ಪಿ, ಮತ್ತು ಬಾಂಬೂ ಕಲೆ ಪರಿಣತಿ ಆಶಾ ಅವರು ತಮ್ಮ ಕೃತಿಗಳ ಮೂಲಕ ಸ್ಥಳವನ್ನು ಜೀವಂತ ಕಲಾ ಪ್ರದರ್ಶನದ ವೇದಿಕೆಯಾಗಿಸಿದರು.

ನೂರಾರು ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿ ಕಲಾವಿದರ ಕೈಯಿಂದಲೇ ಕಲೆಯ ತಂತ್ರಗಳು, ಸೃಜನಾತ್ಮಕ ಪ್ರಕ್ರಿಯೆ ಹಾಗೂ ಅದರ ಹಿಂದಿನ ಕಥೆಗಳನ್ನು ತಿಳಿದುಕೊಂಡರು.

ಶಿಬಿರವು "ಕಲೆಯ ಆತ್ಮವನ್ನು ಉಳಿಸಿ ಮುಂದಿನ ತಲೆಮಾರುಗಳಿಗೆ ಹಸ್ತಾಂತರಿಸುವುದು ನಮ್ಮೆಲ್ಲರ ಹೊಣೆ" ಎಂಬ ಪ್ರೇರಣಾದಾಯಕ ಸಂದೇಶದೊಂದಿಗೆ ಯಶಸ್ವಿಯಾಗಿ ಸಂಪನ್ನವಾಯಿತು.

# ವೈದ್ಯಕೀಯ ಕಾಲೇಜ್ ಹೋರಾಟಕ್ಕೆ ಜೆಡಿಎಸ್ ಬೆಂಬಲ

ವಿಜಯಪುರ,ಅ.24: ವಿಜಯಪುರ ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜ್ ಸ್ಥಾಪಿಸುವಂತೆ ಹೋರಾಟ ಸಮಿತಿ ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಕೈಗೊಂಡ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಶುಕ್ರವಾರ 37ನೇ ದಿನಕ್ಕೆ ಕಾಲಿಟ್ಟಿದೆ.

ವಿವಿಧ ಸಂಘಟನೆಗಳು ವ್ಯಾಪಕ ಬೆಂಬಲ ನೀಡುತ್ತಿದ್ದು, ದಿನೇ ದಿನೇ ಹೋರಾಟ ತೀವ್ರತೆ ಪಡೆಯುತ್ತಿದೆ. ಆದರೂ ಕುಂಭಕರ್ಣ ನಿದ್ರೆಯಲ್ಲಿರುವ ಸರ್ಕಾರ ಎಚ್ಚೆತ್ತುಕೊಳ್ಳುತ್ತಿಲ್ಲ. ಇದರಿಂದ ಹೋರಾಟಗಾರರು ತೀವ್ರ ಅಸಮಾಧಾನಗೊಂಡಿದ್ದಾರೆ. ಹೋರಾಟಗಾರರ ನ್ಯಾಯಯುತ ಬೇಡಿಕೆಯನ್ನು ಸರ್ಕಾರ ಕೂಡಲೇ ಈಡೇರಿಸಬೇಕು ಎನ್ನುವುದು ಎಲ್ಲರ ಒತ್ತಾಯವಾಗಿದೆ.

ಸತ್ಯಾಗ್ರಹ ವೇದಿಕೆಗೆ ಭೇಟಿ ನೀಡಿ ಬೆಂಬಲ ವ್ಯಕ್ತಪಡಿಸಿದ ಜಿಲ್ಲಾಧ್ಯಕ್ಷ ಬಸನಗೌಡ ಮಾಡಗಿ ಮಾತನಾಡಿ, ಈ ಹೋರಾಟ ನ್ಯಾಯಯುತವಾಗಿದೆ. ಸರ್ಕಾರಿ ವೈದ್ಯಕೀಯ ಕಾಲೇಜು ಆಗುವವರೆಗೂ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ನಾನು ನಮ್ಮ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಬಳಿ ನಿಯೋಗ ಕರೆದುಕೊಂಡು ನ್ಯಾಯ ದೊರಕಿಸುವೆ. ಈ ಹೋರಾಟ ರಾಜ್ಯಮಟ್ಟದಲ್ಲಿ ಹರಡುವಂತೆ ಯೋಜನೆ ರೂಪಿಸಬೇಕಾಗಿದೆ.

ಈ ಸರ್ಕಾರಕ್ಕೆ ಕಿವಿ, ಕಣ್ಣು, ಬಾಯಿ ಇಲ್ಲವೇ ಇಲ್ಲ. ನಮ್ಮ ಜಿಲ್ಲೆಯ ಜನತೆಯ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ ಎಂದು ಟೀಕಿಸಿದರು.

ಪ್ರಧಾನ ಕಾರ್ಯದರ್ಶಿ ಸಂಜೀವ ಹಿರೇಮಠ, ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಪೀರಪಾಷಾ ಗಚಿನಮಹಲ್, ತಾಲೂಕು ಅಧ್ಯಕ್ಷ ನಿಂಗನಗೌಡ ಸೋಲಾಪುರ, ನಗರ ಅಧ್ಯಕ್ಷ ಪ್ರಶಾಂತ ಕಿಣಗಿ, ಎಸ್ಸಿ ಘಟಕದ ಹರೀಶ ನಾಯಕ, ರವಿ ಚವ್ಹಾಣ, ಸಂತೋಷ ಬಿರಾದಾರ, ಲಕ್ಷ್ಮಣ ಹಿಪ್ಪರಗಿ ಉಪಸ್ಥಿತರಿದ್ದರು.

ಕಾರ್ಯದರ್ಶಿ ಸಂಜೀವ ಹಿರೇಮಠ, ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಪೀರಪಾಷಾ ಗಚಿನಮಹಲ್, ತಾಲ್ಲೂಕು ಅಧ್ಯಕ್ಷ ನಿಂಗನಗೌಡ ಸೋಲಾಪುರ, ನಗರ ಅಧ್ಯಕ್ಷ ಪ್ರಶಾಂತ ಕಿಣಗಿ, ಎಸ್ಸಿ ಘಟಜದ ಹರೀಶ ನಾಯಕ, ರವಿ ಚವ್ಹಾಣ, ಸಂತೋಷ ಬಿರಾದಾರ, ಲಕ್ಷ್ಮಣ ಹಿಪ್ಪರಗಿ ಹಾಗೂ ಹೋರಾಟ ಸಮಿತಿಯ ಎಲ್ಲಾ ಸದಸ್ಯರು ಈ ಧರಣಿಯಲ್ಲಿ ಉಪಸ್ಥಿತರಿದ್ದರು.



# ಜಂಟಿ ಸುತ್ತೋಲೆ ಹಿಂಪಡೆಯಲು ಆಗ್ರಹ



ಕಲಬುರಗಿ,ಅ.24:ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಹಿರಿಯ ಉಪನ್ಯಾಸಕರುಗಳ ಮೂಲಕ ಸರ್ಕಾರಿ ಪದವಿಪೂರ್ವ ಕಾಲೇಜು ಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳ ಸ್ಥಿತಿಗತಿಗಳ ಮಾಹಿತಿ ಸಂಗ್ರಹಿಸುವ ಜಂಟಿ ಸುತ್ತೋಲೆ ಹಿಂಪಡೆಯುವಂತೆ ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ಜಿಲ್ಲಾ ಘಟಕದ ವತಿಯಿಂದ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರ ಮುಖಾಂತರ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಪ್ರಧಾನ ಕಾರ್ಯದರ್ಶಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದೆ.

2025 ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ನಿಗಾವಹಿಸುವ ಉದ್ದೇಶದಿಂದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ

ಸಂಸ್ಥೆಗಳಲ್ಲಿ (DIET) ಸೇವೆ ಸಲ್ಲಿಸುತ್ತಿರುವ ಹಿರಿಯ ಉಪನ್ಯಾಸಕರ ಮೂಲಕ ಸ್ಥಳೀಯ ಪರಿಶೀಲನೆಯನ್ನು ನಡೆಸಲು ತೀರ್ಮಾನಿಸಲಾಗಿದೆ. DSERT ಮತ್ತು ಶಾಲಾಶಿಕ್ಷಣ ಇಲಾಖೆ (ಪದವಿಪೂರ್ವ) ನಿರ್ದೇಶನಾಲಯಗಳು ಒಟ್ಟಿಗೆ ಹೊರಡಿಸಿರುವ ಈ ಜಂಟಿ ಸುತ್ತೋಲೆ ಪದವಿಪೂರ್ವ ಶಿಕ್ಷಣದ ಅಸ್ಮಿತೆ, ಗೌರವ ಮತ್ತು ಶೈಕ್ಷಣಿಕ ತತ್ವಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿದೆ.

ಸುತ್ತೋಲೆಯಲ್ಲಿ ಡಯಟ್‌ನ ಹಿರಿಯ ಉಪನ್ಯಾಸಕರು ಎಂದು ಸುತ್ತೋಲೆಯಲ್ಲಿ ಉಲ್ಲೇಖಿಸಲಾಗಿದೆ. ಆದರೆ, ವಾಸ್ತವವಾಗಿ ಡಯಟ್‌ನಲ್ಲಿ ಇರುವ ಹುದ್ದೆ ಉಪನ್ಯಾಸಕರ ಹುದ್ದೆ ಅಲ್ಲ ಅದು ಪ್ರಶಿಕ್ಷಕರ ಹುದ್ದೆ. ಅವರ ಸಾಮಾನ್ಯ ವಿದ್ಯಾರ್ಹತೆ ಃಖಿ/ಃಂ ಃಇಜ. ಪ್ರೌಢಶಾಲಾ ಮುಖ್ಯ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಡಯಟ್‌ನಲ್ಲಿ ಉಪನ್ಯಾಸಕರ ಹುದ್ದೆ ಇರುವುದಿಲ್ಲ. ಅವರನ್ನು Teacher Educator ಅಂದರೆ ಪ್ರಶಿಕ್ಷಕ ಎಂದು ಸಂಬೋಧನೆ ಮಾಡುತ್ತಾರೆ. ಅವರು ವಿಷಯಕ್ಕೆ ಸಂಬಂಧಪಟ್ಟಂತೆ ವಿಷಯಾಧಾರಿತ ಬೋಧನಾ ಪದ್ಧತಿ ಪಾಠ ಮಾಡುತ್ತಾರೆ ವಿನಹಃ ಅವರಿಗೆ ಪದವಿಪೂರ್ವ ಶಿಕ್ಷಣದ ವಿಷಯಕ್ಕೆ ಸಂಬಂಧಪಟ್ಟಂತೆ (10+2) ಯಾವುದೇ ಆಳವಾದ ಜ್ಞಾನ ಇರುವುದಿಲ್ಲ. ಪದವಿಪೂರ್ವ ಶಿಕ್ಷಣ ಹಂತವು ಶಾಲಾ ತರಬೇತಿಯ ವಿಸ್ತರಣೆ ಅಲ್ಲ. ಅದು ವೈಜ್ಞಾನಿಕ ಆಧಾರಿತ ಸ್ಪರ್ಧಾತ್ಮಕ ಹಾಗೂ ರಾಷ್ಟ್ರಮಟ್ಟದ ಪಠ್ಯಕ್ರಮ.DIET ಉಪನ್ಯಾಸಕರಿಗೆ ಪದವಿಪೂರ್ವ ಪಠ್ಯಕ್ರಮ ವೈಜ್ಞಾನಿಕ ಹಿನ್ನೆಲೆ NCERT ಆಧಾರಿತ ವಿಷಯದ ವ್ಯಾಪ್ತಿ ಹಾಗೂ ಆಳವಾದ ಕಲ್ಪನೆಗಳ ಕುರಿತ ಅರಿವು ಇರುವುದಿಲ್ಲ. ಡಯಟ್ ಉಪನ್ಯಾಸಕರ ಕನಿಷ್ಠ ವಿದ್ಯಾರ್ಹತೆ: BSc/BA,BEd ಜೊತೆಗೆ ಪ್ರೌಢಶಾಲಾ ಮುಖ್ಯ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಬಹಳಷ್ಟು ಪ್ರಶಿಕ್ಷಕರಿಗೆ ಸ್ನಾತಕೋತ್ತರ ಪದವಿ NET|SLET/MPhil, PhD ಪದವಿ ಇರುವುದಿಲ್ಲ. ಇನ್ನು ಡಯಟ್‌ನ ಪ್ರಶಿಕ್ಷಕರು ಪ್ರೌಢಶಾಲೆಯಲ್ಲಿ ಸೀನಿಯರ್ ಅಸಿಸ್ಟೆಂಟ್ ಟೀಚರ್ ಹುದ್ದೆಯಿಂದ ಬಡ್ತಿ ಪಡೆದು ಡಯಟ್‌ನ ಪ್ರಶಿಕ್ಷಕರ ಹುದ್ದೆಗೆ ವರ್ಗಾವಣೆಗೊಂಡಿರುತ್ತಾರೆ. ಇವರು ಡಯಟ್‌ನಲ್ಲಿ

ಅಂದಿನ TCH, DEd. ಇಂದು ಆಐಇಆಗೆ ಪಾಠ ಮಾಡಲು ಮಾತ್ರ ಅರ್ಹತೆ ಹೊಂದಿದ್ದಾರೆ. ಡಯಟ್ ಪ್ರಶಿಕ್ಷಕರಿಗೆ ಏಂ??ಂಂಅ ಪ್ರಾಥಮಿಕ ಶಿಕ್ಷಣ ಹಾಗೂ ಮಾಧ್ಯಮಿಕ ಶಿಕ್ಷಣದ ಶಿಕ್ಷಕರಿಗೆ ತರಬೇತಿ ನೀಡುವುದು ಮಾತ್ರ ಅವರ ವ್ಯಾಪ್ತಿಗೆ ಬರುತ್ತದೆ. ಪದವಿಪೂರ್ವ ಶಿಕ್ಷಣದ ಗಣಿತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಎಲೆಕ್ಟ್ರಾನಿಕ್ಸ್, ಗಣಕವಿಜ್ಞಾನ ವಿಷಯಕ್ಕೆ ಸಂಬಂಧಪಟ್ಟಂತೆ ಪರಿಕಲ್ಪನೆ ಇರುವುದಿಲ್ಲ.

# ಚನ್ನಮ್ಮ ವ್ಯಕ್ತಿತ್ವ ಸದಾ ಸ್ಫೂರ್ತಿದಾಯಕ: ಗದಿಗೆಪ್ಪಗೌಡರ

ವಿಜಯಪುರ,ಅ.24: ವೀರರಾಣಿ ಕಿತ್ತೂರು ರಾಣಿ ಚನ್ನಮ್ಮ ಅವರ ವ್ಯಕ್ತಿತ್ವ ಸದಾ ಸ್ಫೂರ್ತಿದಾಯಕ ಎಂದು ಅಕಾಡೆಮಿ ಸದಸ್ಯೆ ಡಾ.ಮೈತ್ರೇಯಿಣಿ ಗದಿಗೆಪ್ಪಗೌಡರ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ಗುರುವಾರ ಆಯೋಜಿಸಿದ್ದ ಕಿತ್ತೂರು ರಾಣಿ ಚನ್ನಮ್ಮಾಜಿ ಜಯಂತಿ ಹಾಗೂ ವಿಜಯೋತ್ಸವದ ವಿಶೇಷ ಉಪನ್ಯಾಸ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರಬಲ ಆಂಗ್ಲರ ವಿರುದ್ಧ ಹೋರಾಟ ನಡೆಸಿ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮುನ್ನುಡಿ ಬರೆದ ಕೀರ್ತಿ ಕಿತ್ತೂರಿನ ವೀರರಾಣಿ ಚನ್ನಮ್ಮನಿಗೆ ಸಲ್ಲುತ್ತದೆ. ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ಮೂಲಕ ಮಾನವೀಯತೆಗೆ ಹೆಸರಾದ ರಾಣಿ ಚನ್ನಮ್ಮನ ವ್ಯಕ್ತಿತ್ವ ಸದಾ ಸ್ಫೂರ್ತಿದಾಯಕವಾಗಿದೆ.

ಝಾನ್ಸಿಯ ರಾಣಿ ಲಕ್ಷ್ಮೀಬಾಯಿ ಅವರ ಹೋರಾಟಕ್ಕಿಂತ 33 ವರ್ಷ ಮೊದಲು ಕಿತ್ತೂರಿನ ರಾಣಿ ಚನ್ನಮ್ಮ ಅವರು ಬ್ರಿಟಿಷ್ ಅಧಿಕಾರಿಗಳಿಗೆ ಮೊದಲ ಸೋಲನ್ನು ನೀಡಿದರು. ಕಿತ್ತೂರಿನ ಸರದಾರ್ ಗುರುಸಿದ್ಧಪ್ಪ ಅಮಟೂರು, ಬಾಳಪ್ಪ ಬಿಚ್ಚುಗತ್ತಿ, ಚನ್ನಬಸಪ್ಪ, ಸಂಗೊಳ್ಳಿ ರಾಯಣ್ಣ, ವಡ್ಡರ ಯಲ್ಲಣ್ಣನಂತಹ ವೀರರ ಸಂಘಟಿತ ಹೋರಾಟ ಇಂದಿಗೂ ಭಾರತದ ಇತಿಹಾಸದಲ್ಲಿ ಅಜರಾಮರವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿವಿಯ ಕುಲಪತಿ ಪ್ರೊ. ವಿಜಯಾ ಕೋರಿಶೆಟ್ಟಿ ಮಾತನಾಡಿ, "ಮೌಲ್ಯಾಧಾರಿತ ಬದುಕಿನಿಂದ ವ್ಯಕ್ತಿತ್ವ ರೂಪಿಸಿಕೊಳ್ಳುವ ತುರ್ತು ಅಗತ್ಯ ನಮ್ಮ ಮುಂದೆ ಇದೆ. ಇಂದು 'ರೀಲ್ಸ್ ಲೈಫ್'ಗಿಂತ 'ರಿಯಲ್ ಲೈಫ್' ಬಗ್ಗೆ ಎಚ್ಚರಿಕೆಯಿಂದ ಬದುಕುವುದು ಮುಖ್ಯ. ಕಿತ್ತೂರು ರಾಣಿ ಚನ್ನಮ್ಮ ಅವರಂತಹ ಸಬಲೀಕೃತ ರಾಣಿಯ ಜೀವನಾದರ್ಶಗಳು ವಿದ್ಯಾರ್ಥಿನಿಯರಿಗೆ ಮಾದರಿಯಾಗಬೇಕು," ಎಂದರು.

ಇದೇ ಸಂದರ್ಭದಲ್ಲಿ ಮಹಿಳಾ ವಿವಿಯ ಕುಲಸಚಿವ ಶಂಕರಗೌಡ ಸೋಮನಾಳ ಮಾತನಾಡಿ, "ಕರ್ನಾಟಕ ಎಂದರೆ ಅದು ಕಿತ್ತೂರು ಚನ್ನಮ್ಮ ಅವರ ನೆನಪನ್ನು ಜೀವಂತವಾಗಿಟ್ಟಿದೆ. ಅವರ ಬದುಕು ನಮಗೆ ಚೈತನ್ಯ ತುಂಬುತ್ತದೆ," ಎಂದು ಅಭಿಪ್ರಾಯಪಟ್ಟರು. ಉಪನ್ಯಾಸಕ್ಕೆ ಸಂಬಂಧಿಸಿದಂತೆ ಹತ್ತು ಪ್ರಶ್ನೆಗಳನ್ನು ಕೇಳಿ ಸರಿಯಾದ ಉತ್ತರ ನೀಡಿದ ವಿದ್ಯಾರ್ಥಿನಿಯರಿಗೆ ಪುಸ್ತಕ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದ ಸಂಯೋಜಕ ಬಸವ ಅಧ್ಯಯನ ಪೀಠದ ಅಧ್ಯಕ್ಷ ಪ್ರೊ. ರಾಜಕುಮಾರ ಮಾಲಿಪಾಟೀಲ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿ, "ಚನ್ನಮ್ಮ ಅವರ ಜೀವನ ಇತಿಹಾಸ ಹೆಣ್ಣುಮಕ್ಕಳಿಗೆ ಸ್ವಾಭಿಮಾನಿ ಬದುಕನ್ನು ರೂಪಿಸಿಕೊಳ್ಳಲು ಪ್ರೇರಣೆಯಾಗಿದೆ," ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರೊ. ಬಿ.ಎಲ್.ಲಕ್ಕಣ್ಣನವರ, ವಿವಿಧ ವಿಭಾಗದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು. ಸ್ನಾತಕ ದೈಹಿಕ ಶಿಕ್ಷಣ ವಿಭಾಗದ ಅಶ್ವಿನಿ ಮತ್ತು ಅನ್ನಪೂರ್ಣ ಪ್ರಾರ್ಥನೆ ಸಲ್ಲಿಸಿದರು. ಸ್ನಾತಕೋತ್ತರ ದೈಹಿಕ ಶಿಕ್ಷಣ ವಿಭಾಗದ ರಾಜೇಶ್ವರಿ ನಿರೂಪಣೆ ಮಾಡಿ, ಅಶ್ವಿನಿ ವಂದಿಸಿದರು.












# ಸರ್ವಜ್ಞ ವಿದ್ಯಾಸಂಸ್ಥೆಯಲ್ಲಿ ಚೆನ್ನಮ್ಮ ಜಯಂತಿ ಆಚರಣೆ



ತಾಳಿಕೋಟೆ:ಅ.24: ಪಟ್ಟಣ ದಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಇಂದು ವೀರರಾಣಿ ಕಿತ್ತೂರ ಚೆನ್ನಮ್ಮಳ ಜಯಂತ್ಯೋತ್ಸವವನ್ನು ಆಚರಿಸಲಾಯಿತು. ಈ ಸಮಯದಲ್ಲಿ ವೀರರಾಣಿ ಕಿತ್ತೂರ ಚೆನ್ನಮ್ಮಳ ಭಾವಚಿತ್ರಕ್ಕೆ ಸಂಸ್ಥೆಯ ಅಧ್ಯಕ್ಷರಾದ ಸಿದ್ದನಗೌಡ ಮಂಗಳೂರ ಅವರು ಮಹಾ ಪೂಜೆ ಸಲ್ಲಿಸಿದರು.

ಈ ಸಮಯದಲ್ಲಿ ಮಾತನಾಡಿದ ಅವರು ಸ್ವಾತಂತ್ರ್ಯದ ಕಹಳೆ ಮೊಳಗಿಸಿದ ಮೊದಲ ಮಹಿಳೆ ಕಿತ್ತೂರ ರಾಣಿ ಚೆನ್ನಮ್ಮಳಾಗಿದ್ದಾರೆ ಬ್ರಿಟಿಷರ ವಿರೂದ್ದ ಹೋರಾಡ ಕಿತ್ತೂರ ಸಂಸ್ಥಾನದ ಜೊತೆಗೆ ಬ್ರಿಟಿಷರನ್ನು ಹುಟ್ಟಡಗಿಸುವಂತಹ ಕೆಲಸ ಮಾಡಿದರು ಈ ಕಾರ್ಯದಲ್ಲಿ ಸಂಗೋಳಿ ರಾಯಣನ ಸ್ಪೂರ್ತಿಯೂ ಎಲ್ಲರಿಗೂ ಮಾದರಿಯಾಗಿದೆ ಆದರ್ಶ ಪುರುಷರನ್ನು ಯಾವುದೇ ಒಂದೇ ಸಮಾಜಕ್ಕೆ ಹೋಲಿಸದೇ ಸರ್ವ ಜನಾಂಗದವರು ಅವರು ಆದರ್ಶ ಗುಣಗಳನ್ನು ಅನುಸರಿಸಿಕೊಂಡು ಹೋಗಬೇಕಾಗಿದೆ ಎಂದರು.

ಈ ಸಮಯದಲ್ಲಿ ಮುಖ್ಯಗುರುಗಳಾದ ಸಂತೋಷ. ಪವಾರ, ರಾಜು ಜವಳಗೇರಿ, ದೈಹಿಕ ಶಿಕ್ಷಕರಾದ ಬಸವರಾಜ ಚಳಗಿ, ಶಾಂತಗೌಡ ಬಿರಾದಾರ, ಸಂಜು ಕುಮಾರ ರಾಥೋಡ, ಬಸವರಾಜ ಸವದತ್ತಿ, ರವಿಕುಮಾರ ಅನಧಿನಿ, ರವಿಕುಮಾರ ಮಲಾಬಾದಿ, ರಸೂಲಸಾ ತುರ್ಕಣಗೇರಿ, ಸಿದ್ದನಗೌಡ ಮುದ್ನೂರ,

ಭೀಮನಗೌಡ ಸಾಸನೂರ, ಮಾರುತಿ ಕಾರ್ಬರಿ, ಸವಿತಾ ಅಸ್ಕಿ,ಶಿವ ಲೀಲಾ ಚುಂಚೂರು, ರೂಪ ಪಾಟೀಲ, ಸಂಗಮೇಶ ಬಿರಾದಾರ, ಸಂಗೀತ ಬಿರಾದಾರ, ಮೇಘಾ ಪಾಟೀಲ, ಬೋರಮ್ಮ ಉಕ್ಕಲಿ, ಅನಿತಾ ಚೌದ್ರಿ, ಜ್ಯೋತಿ ಪೋಲಿಸ್ ಪಾಟೀಲ, ಶೃತಿ ಚೌದ್ರಿ, ರಾಜಬಿ ಬಿದರಿ, ನಾಗರತ್ನ ಮೈಲೇಶ್ವರ,ಶಿವಕುಮಾರ ಕುಂಬಾರ, ಹೀನಾ ಸನದಿ, ದೇವೇಂದ್ರ ಗುಳೆದ, ಶರಣಗೌಡ ಕಾಚಾಪುರ, ದೇವರಾಜ ದೇಸಾಯಿ, ಭಗವಂತ ಸಿಂದಗಿ, ಶಂಕ್ರಮ್ಮ ಕೀರದಳ್ಳಿ, ಸುಮಾ ಹಿರೇಮಠ, ಪ್ರತಿಭಾ ಗುಬ್ಬೇವಾಡ, ಗುರುದೇವಿ ಮಡಿವಾಳರ, ಜೈಯಶ್ರೀ ಹದಿಮೂರ, ಜೈರಾಬಿ ಮುಲ್ಲಾ ಸರ್ವ ಸಿಬ್ಬಂದಿ ವರ್ಗದವರು ಮತ್ತು ಮುದ್ದು ವಿದ್ಯಾರ್ಥಿಗಳು ಇದ್ದರು.

# ರಾಷ್ಟದ ಅಭಿವೃದ್ಧಿಯಲ್ಲಿ ಮಾಹಿತಿ ಮತ್ತು ಸಂವಹನದ ಪಾತ್ರ ಪ್ರಮುಖ

ಕಲಬುರಗಿ:ಅ.24:ವಿಶ್ವದ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಗತಿ, ಸಮಸ್ಯೆಗಳು ಮತ್ತು ಪರಿಹಾರೋಪಾಯಗಳ ಕುರಿತು ವಿಶ್ವದೆಲ್ಲೆಡೆ ಜನ ಜಾಗೃತಿ ಮೂಡಿಸಲು ಮತ್ತು ಅವುಗಳನ್ನು ಪರಿಹರಿಸಲು ಅಂತರ ರಾಷ್ಟ್ರೀಯ ಸಹಕಾರವನ್ನು ಉತ್ತೇಜಿಸುವಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳ ಪಾತ್ರ ಪ್ರಮುಖವಾಗಿದೆ. ಇವುಗಳ ಸದುಪಯೋಗಪಡಿಸಿಕೊಂಡು ರಾಷ್ಟ್ರ ಸೇರಿದಂತೆ ಜಾಗತಿಕ ಅಭಿವೃದ್ಧಿಗೆ ಎಲ್ಲರು ಕೈಜೋಡಿಸುವುದು ಇಂದಿನ ಅಗತ್ಯವಾಗಿದೆ ಎಂದು ಅರ್ಥಶಾಸ್ತ್ರ ಉಪನ್ಯಾಸಕ ಎಚ್.ಬಿ.ಪಾಟೀಲ್ ಹೇಳಿದರು.


ನಗರದ ಜೆ.ಆರ್ ನಗರದಲ್ಲಿನ 'ಸಕ್ಸಸ್ ಕಂಪ್ಯೂಟರ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ವಿಶ್ವ ಮಾಹಿತಿ ಪ್ರಸಾರ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳು ಆರ್ಥಿಕ ಬೆಳವಣಿಗೆ, ಜ್ಞಾನದ ಪ್ರವೇಶ ಮತ್ತು ಸಾಮಾಜಿಕ ಒಳಗೊಳ್ಳುವಿಕೆಯನ್ನು ಹೇಗೆ ಉತ್ತೇಜಿಸಬಹುದು ಎಂಬುದರ ಮೇಲೆ ಗಮನಹರಿಸುತ್ತವೆ. ಸಾಮಾಜಿಕ ಕ್ಷೇತ್ರವು ವ್ಯಕ್ತಿಯಲ್ಲಿ ಸಂಸ್ಕಾರ, ಮೌಲ್ಯಗಳು ಬೆಳೆಸುತ್ತದೆ.ಕಲೆ,ಸಾಹಿತ್ಯ, ಸಂಸ್ಕೃತಿ, ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಹೋಗುವ ಮೂಲಕ ಸಾಮಾಜಿಕ ವ್ಯವಸ್ಥೆಗೆ ಭದ್ರತೆಯನ್ನು ನೀಡುತ್ತದೆ. ಇದು ಕುಟುಂಬ, ಧರ್ಮ, ಶಾಲೆ, ಸಮೂಹ ಮಾಧ್ಯಮ, ನೆರೆಹೊರೆಯ ಪರಿಸರವನ್ನು ಕಾಪಾಡುತ್ತದೆ. ಆರ್ಥಿಕ ಕ್ಷೇತ್ರವು ರಾಷ್ಟದಲ್ಲಿರುವ ಪ್ರತಿಯೊಬ್ಬರ ಜೀವನ ಮಟ್ಟ ಉತ್ತಮವಾಗಬೇಕೆಂಬ ಮಹತ್ವಕಾಂಕ್ಷೆ ಹೊಂದಿದೆ. ಸಾಮಾಜಿಕ-ಆರ್ಥಿಕ ಕ್ಷೇತ್ರಗಳ ಬೆಳವಣಿಗೆಯು ವಿಶ್ವದ ಅಭಿವೃದ್ಧಿಗೆ ಪೂರಕವಾಗಿದೆ ಎಂದರು.

ಸಾಮಾಜಿಕ ಕ್ಷೇತ್ರದ ಅಭಿವೃದ್ಧಿಯಿಂದ ವ್ಯಕ್ತಿಯ ಬೆಳವಣಿಗೆಗೆಯಾಗುತ್ತದೆ. ಮೌಢ್ಯತೆ, ಕಂದಾಚಾರ, ಅಂಧಶೃದ್ಧೆ, ವರದಕ್ಷಿಣೆಯಂತಹ ಸಾಮಾಜಿಕ ಸಮಸ್ಯೆಗಳು ನಿರ್ಮೂಲನೆಯಾಗಿ ಸಾಮಾಜಿಕ ಕ್ಷೇತ್ರ ಅಭಿವೃದ್ಧಿಯಾಗುತ್ತದೆ.

ವ್ಯಕ್ತಿಯ ತಲಾದಾಯ ಮತ್ತು ರಾಷ್ಟ್ರಾದಾಯ ಹೆಚ್ಚಳ, ಕೃಷಿ, ಕೈಗಾರಿಗೆ, ವಾಣಿಜ್ಯ, ವ್ಯಾಪಾರ, ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಾಗಬೇಕು. ಬಡತನ, ನಿರುದ್ಯೋಗ, ಅನಕ್ಷರತೆ, ಲಿಂಗ ತಾರತಮ್ಯ, ಪ್ರಾದೇಶಿಕ ಅಸಮತೋಲನೆ, ಜನಸಂಖ್ಯಾ ಸ್ಫೋಟದಂತಹ ಸಮಸ್ಯೆಗಳು ನಿರ್ಮೂಲನೆಯಾದರೆ ಆರ್ಥಿಕ ಕ್ಷೇತ್ರದ ಅಭಿವೃದ್ಧಿ ಸಾಧ್ಯವಿದೆ. ಅಭಿವೃದ್ಧಿಯ ನೆಪದಲ್ಲಿ ಪರಿಸರದ ಮೇಲೆ ಮಾನವನ ದಬ್ಬಾಳಿಕೆ ಸಲ್ಲದು. 'ಸುಸ್ಥಿರ ಅಭಿವೃದ್ಧಿ'ಯ ಅಗತ್ಯವಿದೆ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್, ನಿವೃತ್ತ ಕೃಷಿ ಅಧಿಕಾರಿ ಶಿವಯೋಗೆಪ್ಪಾ ಎಸ್.ಬಿರಾದಾರ, ಶಿಕ್ಷಕಿಯರಾದ ನಿಲೊಫರ್ ಶೇಖ್, ಪೂಜಾ ಹೂಗಾರ, ಕಾವೇರಿ ಹೌದೆ, ಮುಸ್ಕಾನ್ ಶೇಖ್ ಹಾಗೂ ವಿದ್ಯಾರ್ಥಿಗಳಿದ್ದರು.



# ಇತಿಹಾಸ ಸಾರುವ ಕಲಬುರಗಿ- ಹೀರಾಪೂರ ಸ್ಮಾರಕಗಳು: ಮುಡುಬಿ ಗುಂಡೇರಾವ



ಕಲಬುರಗಿ:ಅ.24: ಪ್ರಾಚೀನ ಮತ್ತು ಮಧ್ಯಯುಗದ ಇತಿಹಾಸ ಸಾರುವ ಕಲಬುರಗಿ ಮತ್ತು ಹೀರಾಪೂರ ಸ್ಮಾರಕಗಳ ಕೊಡುಗೆ ಅಪಾರವಾಗಿದೆ ಎಂದು ಸಂಶೋಧಕ ಮುಡುಬಿ ಗುಂಡೇರಾವ ಅಭಿಮತವ್ಯಕ್ತಪಡಿಸಿದರು.

ಅವರು ನಗರದ ಸಮೀಪ ಹೀರಾಪೂರ ಗ್ರಾಮದ ಮಲ್ಲಿಕಾರ್ಜುನ ದೇವಾಲಯದಲ್ಲಿ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ಪರಿಚಯಾತ್ಮಕ -41 ಕಾರ್ಯಕ್ರಮದಲ್ಲಿ ನಮ್ಮ ಹೆಮ್ಮೆಯ ಕಲಂಬುರಗಿ ಇತಿಹಾಸ ತಿಳಿಯೋಣ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು. ಮೌರ್ಯರು, ಶಾತವಾಹನರು, ಯಾದವರು, ಬಾದಾಮಿ ಚಾಲೂಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು, ಕಲಚೂರರು, ಬಹಮನಿಯರು ಮತ್ತು ವಿಜಯನಗರ ಸಾಮ್ರಾಜ್ಯದ ದೊರೆಗಳು ಕಲಬುರಗಿಯನ್ನು ಆಳಿಕೆ ಮಾಡುವ ಮೂಲಕ ಈ ನೆಲದಲ್ಲಿ ಕಲೆ, ಸಾಹಿತ್ಯ, ಸಂಗೀತ ಮುಂತಾದ ಕ್ಷೇತ್ರಗಳನ್ನು ಸಮೃದ್ಧಿಗೊಳಿಸಿದ್ದಾರೆ, ರಾಷ್ಟಕೂಟರು ಮಾನ್ಯಖೇಟವನ್ನು, ಬಹಮನಿಯರು ಕಲಬುರಗಿಯನ್ನು ರಾಜಧಾನಿಯನ್ನಾಗಿ ಆಳ್ವಿಕೆ ಮಾಡಿದ್ದಾರೆ,

ಕನ್ನಡ ನಾಡಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ. ಹೀರಾಪೂರದಲ್ಲಿ ಬಿಜಾಪೂರ ಆದಿಲ್ ಶಹ ಮನೆತನದ ಚಾಂದಬೀಬಿ ನಿರ್ಮಿಸಿದ ಹೀರಾಬಿಬಿ ಮಸೀದಿಯು ಇಂದಿಗೂ ಇತಿಹಾಸವನ್ನು ಸಾರುತ್ತಿದೆ ಅದಕ್ಕಾಗಿ ಇದಕ್ಕೆ ಹೀರಾಪೂರ ಎಂದು ಕರೆಯಲಾಗುತ್ತಿದೆ. ಹಸನಗಂಗು ರಾಜನು ಬಹಮನಿ ಸಾಮ್ರಾಜ್ಯವನ್ನು ಕಲಬುರಗಿಯಲ್ಲಿಯೇ ಸ್ಥಾಪಿಸಿದನು. ಗುಲಬುರ್ಗಾ ಗುಲ್-ಹೂ, ಬರ್ಗ- ಎಲೆ ಎಲೆ ಹೂಗಳಿಂದ ಕೂಡಿದ ಊರೇ ಕಲಬುರಗಿ, ಪ್ರಾಚೀನ ಕಾಲದಲ್ಲಿ ಇದಕ್ಕೆ ಕಲಂಬುರಗಿ ಎಂದು ಕರೆಯಲಾಗುತ್ತಿತ್ತು. ಕಲಬುರಗಿ ಕೋಟೆ, ಜಾಮೀ ಮಸೀದಿ, ತೋಫುಗಳು ಸೇರಿದಂತೆ ಹಲವಾರು ಸ್ಮಾರಕಗಳು ಕಲಬುರಗಿ ನೆಲದ ಸಾಧನೆ, ಸಾಮರಸ್ಯತೆಯನ್ನು ಸಾರುತ್ತದೆ ಎಂದರು.

ಕನ್ನಡ ನಾಡು, ನುಡಿ ಸಂಸ್ಕೃತಿಗೆ ಕಲಬುರಗಿ ಪರಿಸರದವು ಶೈವ, ವೈಷ್ಣವ, ಜೈನ, ಬೌದ್ದ ಧರ್ಮೀಯರು ಬಾಳಿ ಬೆಳಗಿದ ಸಾಮರಸ್ಯದ ನೆಲವೀಡಾಗಿದೆ. ಬಳಗದ ಅಧ್ಯಕ್ಷ ಪ್ರೊ. ಎಚ್ ಬಿ ಪಾಟೀಲ ಮಾತನಾಡಿ ಕಲಬುರಗಿ ನಗರದಲ್ಲಿನ ಸ್ಮಾರಕಗಳ ಪರಿಚಯುವನ್ನು ಇಂದಿನ ಮಕ್ಕಳಿಗೆ ತಿಳಿಸಿಕೊಡಬೇಕು. ಕಳೆದ ಒಂದುವರೆ ವರ್ಷದಿಂದ ನಮ್ಮ ಬಳಗದವತಿಯಿಂದ ಐತಿಹಾಸಿಕ ಜಾಗೃತಿ ಅಭಿಯಾನ ಹಮ್ಮಿಕೊಳ್ಳುವ ಮೂಲಕ ಇತಿಹಾಸ ಅರಿವು ಮೂಡಿಸಲಾಗಿದೆ ಎಂದರು.

ಪ್ರಮುಖರಾದ ಶಿವಯೋಗಪ್ಪ ಬಿರಾದಾರ, ಮಲ್ಲೇಶ ಜಾಪೂರ, ಪ್ರಹ್ಲಾದ ಜಾನೆ, ರಾಜರತ್ನ ನಿಂಬಾಳ್ಕರ, ಅಭಿಷೇಕ ಗುಡೂರ, ಅಶೋಕ ಸಾಗರ, ವಜ್ರಕುಮಾರ ಜಾಪೂರ, ಲೋಕೇಶ ಕಣ್ಣಿ, ಪ್ರದೀಪ ಮದರಿ ಮುಂತಾದವರಿದ್ದರು.

# ಆರ್.ಕೆ.ಪಾಟೀಲರ ಪಾದಯಾತ್ರೆ ಹೆಸರಿನಲ್ಲಿ ಸಾರ್ವಜನಿಕರ ತೆರಿಗೆ ಹಣ ಪೋಲು: ಅಧಿಕಾರ ದುರುಪಯೋಗ ಬಿಜೆಪಿ ಆರೋಪ

ಆಳಂದ:ಅ.24:ಶಾಸಕ ಬಿ.ಆರ್. ಪಾಟೀಲ ಮಾರ್ಗದರ್ಶನದಲ್ಲಿ ಆರ್.ಕೆ. ಪಾಟೀಲ ನೇತೃತ್ವದಲ್ಲಿ ತಾಲೂಕಿನಲ್ಲಿ ಅಕ್ಟೋಬರ್ 24ರಿಂದ 31ರವರೆಗೆ ನಡೆಯುತ್ತಿರುವ "ಗಾಂಧಿ ತತ್ವಗಳ ಪ್ರಸಾರ" ಹೆಸರಿನ ಪಾದಯಾತ್ರೆ ರಾಜಕೀಯ ಪ್ರೇರಿತವಾಗಿದೆ ಎಂದು ಆಳಂದ ಬಿಜೆಪಿ ಬಲವಾಗಿ ವಿರೋಧಿಸಿದೆ.

ಪಾದಯಾತ್ರೆ ಖಾಸಗಿ ಕಾರ್ಯಕ್ರಮವಾಗಿದ್ದರೂ ಸರ್ಕಾರದ ಹೆಸರು ಮತ್ತು ಲಾಂಛನ ಬಳಸಿಕೊಂಡು ಶಿಷ್ಟಾಚಾರ ಪಾಲನೆಗೆ ಗ್ರಾಪಂಗಳಿಗೆ ಇಒ ಮೂಲಕ ನೋಟಿಸ್ ನೀಡಿರುವುದರಿಂದ ಸಾರ್ವಜನಿಕರ ತೆರಿಗೆ ಹಣವನ್ನು ದುರುಪಯೋಗ ಮಾಡಲಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಬಿಜೆಪಿ ಪಕ್ಷದ ಕಚೇರಿಯಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಯುವ ಮುಖಂಡ ಹಾಗೂ ಮಂಡಲ ಮಾಜಿ ಅಧ್ಯಕ್ಷ ಆನಂದರಾವ ಪಾಟೀಲ ಕೊರಳ್ಳಿ, ಬಾಬಾಸಾಹೇಬ ಪಾಟೀಲ, ಶ್ರೀಮಂತ ಸಾರವಾಡ, ಬಾಬುರಾವ ಸರಡಗಿ, ಪ್ರಕಾಶ ತೋಳೆ ಹಾಗೂ ಪಿಂಟು ಝುಳಕಿ ಸೇರಿದಂತೆ ಹಲವರು ಮಾತನಾಡಿದರು.

ಕಳೆದ್ ಒಂದು ವಾರದಿಂದ ಖಜೂರಿಯಲ್ಲಿ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ನೀಡುವಂತೆ ಕೊರಿದರು ಅನುಮತಿ ದೊರೆತ್ತಿಲ್ಲ.

ಇವರ ಪಾದಯಾತ್ರೆಗೆ ಅನುಮತಿ ಸಿಕ್ಕಿದೆಯೇ ಎಂದು ಪ್ರಶ್ನಿಸಿದ ಅವರು, ತಾಪಂ ಇಒ ಅವರು, "ಕನಾರ್ಟಕ ಸರ್ಕಾರ", "ಜಿಪಂ" ಹಾಗೂ "ತಾಪಂ ಆಳಂದ" ಹೆಸರಿನಲ್ಲಿ ಪತ್ರ ಹೊರಡಿಸಿ ಆಯ್ದ ಗ್ರಾಮ ಪಂಚಾಯತಗಳ ಅಭಿವೃದ್ಧಿ ಅಧಿಕಾರಿಗಳಿಗೆ ಸ್ವಚ್ಛತಾ ಕಾರ್ಯ, ಸಭೆ ವ್ಯವಸ್ಥೆ ಮತ್ತು ಪಾದಯಾತ್ರೆ ಸಂದರ್ಭದಲ್ಲಿ ಶಿಷಾ??ಚಾರ ಪಾಲನೆಗಾಗಿ ಆದೇಶಿಸಿದ್ದಾರೆ. ಆದರೆ ಈ ಆದೇಶವು ಶಾಸಕರ ಖಾಸಗಿ ರಾಜಕೀಯ ಕಾರ್ಯಕ್ರಮಕ್ಕೆ ಸರ್ಕಾರಿ ಅಧಿಕಾರಿಗಳನ್ನು ಬಳಸುವ ಪ್ರಯತ್ನ ಎಂದು ಅವರು ಕಟು ಟೀಕೆ ಮಾಡಿದರು.

ಇದೇ ವೇಳೆ, ಶಾಸಕರ ಕಾರ್ಯಾಲಯದ ಹೆಸರಿನಲ್ಲಿ ಕಾರ್ಯದರ್ಶಿ (ಮೊಬೈಲ್ ಸಂಖ್ಯೆ 9449986059) ಸರ್ಕಾರಿ ಅಧಿಕಾರಿಗಳನ್ನು ಬ್ಲ್ಯಾಕ್‌ಮೇಲ್ ಮಾಡಿ, ಪಾದಯಾತ್ರೆಗೆ ಸಿಬ್ಬಂದಿ ಹಾಗೂ ಪಂಚಾಯತ ಸಂಪನ್ಮೂಲಗಳನ್ನು ಬಳಕೆ ಮಾಡಲು ಒತ್ತಡ ಹೇರಿದ್ದಾನೆ ಎಂದು ಆರೋಪಿಸಿದರು. ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವ ಈ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದರು.

ಶಾಸಕ ಬಿ.ಆರ್. ಪಾಟೀಲರ ಅಣ್ಣನ ಮಗ ಹಾಗೂ ಕೆಎಂಎಫ್ ಅಧ್ಯಕ್ಷ ಆರ್.ಕೆ. ಪಾಟೀಲ ಅವರು ಶಾಸಕರಲ್ಲದಿದ್ದರೂ ಸರ್ಕಾರದ ಯೋಜನೆಗಳ ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದು, ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರದ ಮೂಲಕ ಬೀಜ ಹಾಗೂ ಸ್ಪಿಂಕ್ಲರ್ ಪೈಪು ವಿತರಿಸುತ್ತಿರುವುದಾಗಿ ದಾಖಲೆ ಬಿಡುಗಡೆ ಮಾಡಿದ್ದಾರೆ.

ಇದರಿಂದ ಶಿಷಾ??ಚಾರ ಉಲ್ಲಂಘನೆಯಾಗಿದೆ ಎಂದು ಹೇಳಿದರು. ಗ್ರಾಪಂ ಸಿಬ್ಬಂದಿಯ ಮೇಲೆ ರಾಜಕೀಯ ಒತ್ತಡ ಹೇರಿದ ಖಾಸಗಿ ವ್ಯಕ್ತಿ ಶರಣಬಸಪ್ಪ ವಾಗೆ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸದಿದ್ದರೆ ಜಿಲ್ಲಾಡಳಿತದ ವಿರುದ್ಧ ಉಗ್ರ ಹೋರಾಟ ಎಚ್ಚರಿಸಿದ್ದಾರೆ.






Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401